JSS MAHAVIDYAPEETHA

# JSS COLLEGE FOR WOMEN (AUTONOMOUS)

SARASWATHIPURAM, MYSURU

ಜೆಎಸ್‌ಎಸ್ ಮಹಾವಿದ್ಯಾಪೀಠ

# ಜೆಎಸ್‌ಎಸ್ ಮಹಿಳಾ ಕಾಲೇಜು (ಸ್ವಾಯತ್ತ)

ಸರಸ್ವತಿಪುರಂ, ಮೈಸೂರು

ಮೈಸೂರು ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಹಾಗೂ ನ್ಯಾಕ್‌ನಿಂದ ಪುನರ್ ಮೌಲ್ಯಮಾಪನಕ್ಕೆ ಒಳಪಟ್ಟು 'A' ಮಾನ್ಯತೆ ಪಡೆದಿದೆ


೨ನೇ ಮುಖ್ಯ ರಸ್ತೆ, ಸರಸ್ವತಿಪುರಂ, ಮೈಸೂರು–೫೭೦೦೦೯

ದೂರವಾಣಿ : (ಕ) ೦೮೨೧–೨೫೪೮೨೩೯ । ೨೫೪೮೩೮೩


Autonomous College under University of Mysore, Reaccredited by NAAC at ‘A’ Grade


2nd Main Road, Saraswathipuram, MYSURU-570009

Ph : (O) 0821-2548239 (P) 2548383

E-mail : jsscw.principal@gmail.com | website : http://www.jsscw.in


# Prospectus ಪರಿಚಯ ಪುಸ್ತಕ



## The Portal of Dharma





Gaddige, Sutturu Srikshetra



Jagadguru Sri Mantra Maharshi
Shri Shivarathreeshwara Shiva Yogigalu



JSS Math, Sutturu Srikshetra

## ಸುತ್ತೂರು ಶ್ರೀಕ್ಷೇತ್ರ

"ಶ್ರೋತ್ರಿಯೂರು", "ಪ್ರದಕ್ಷಿಣಪುರ" ಎಂಬ ಐತಿಹಾಸಿಕ ಹೆಸರುಗಳನ್ನು ಹೊಂದಿರುವ ಸುತ್ತೂರು ಶ್ರೀಕ್ಷೇತ್ರವು ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕಿನ ಕಪಿಲಾ ನದಿಯ ತೀರದಲ್ಲಿರುವ ಒಂದು ಸುಂದರ ಗ್ರಾಮ. ಬೆಂಗಳೂರಿನಿಂದ ಸುಮಾರು 170 ಕಿ.ಮೀ. ಹಾಗೂ ಮೈಸೂರಿನಿಂದ ದಕ್ಷಿಣಕ್ಕೆ 28 ಕಿ.ಮೀ. ದೂರದಲ್ಲಿದೆ. ರಾಷ್ಟ್ರೀಯ ಹೆದ್ದಾರಿ 766ರಲ್ಲಿ ವರುಣಾದಿಂದ 15 ಕಿ.ಮೀ. ಅಂತರದಲ್ಲಿದೆ. ನಂಜನಗೂಡು ತಿ.ನರಸೀಪುರ ರಾಜ್ಯ ಹೆದ್ದಾರಿ 84 ಸುತ್ತೂರಿನ ಮೂಲಕ ಹಾದುಹೋಗುತ್ತದೆ. ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಪವಿತ್ರ ಗದ್ದುಗೆಯ ದರ್ಶನ ಮಾಡಲು ವರ್ಷವಿಡೀ ಲಕ್ಷಾಂತರ ಭಕ್ತರು ಶ್ರೀಕ್ಷೇತ್ರಕ್ಕೆ ಆಗಮಿಸುತ್ತಾರೆ.

ಜನಮಾನಸದಲ್ಲಿ ಶ್ರೀ ಸುತ್ತೂರು ಮಠ ಎಂದೇ ಪರಿಚಿತವಾಗಿರುವ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠವು ಆಧ್ಯಾತ್ಮಿಕ ಮೌಲ್ಯ ಹಾಗೂ ತತ್ತ್ವಗಳ ಹಿನ್ನೆಲೆಯಲ್ಲಿ ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯನ್ನು ಪ್ರೋತ್ಸಾಹಿಸುವ ಅಪೂರ್ವ ಧಾರ್ಮಿಕ ಕೇಂದ್ರವಾಗಿದೆ. ಶ್ರೀಮಠದ ಚಟುವಟಿಕೆಗಳ ಪ್ರಭಾವಲಯವು ಇಡೀ ಕರ್ನಾಟಕ ಮತ್ತು ನೆರೆಹೊರೆಯ ರಾಜ್ಯಗಳಷ್ಟೇ ಅಲ್ಲದೆ ಬಹು ದೂರದ ವಿದೇಶಗಳಿಗೂ ಹಬ್ಬಿದೆ, ಅಪಾರ ಜನಮನ್ನಣೆಯನ್ನು ಗಳಿಸಿದೆ.

ಶ್ರೀಮಠದ ಗುರುಪರಂಪರೆಯ ಇತಿಹಾಸವು ಇಲ್ಲಿನ ಪೂಜ್ಯರುಗಳಿಗೆ ಇದ್ದ ಸಾಮಾಜಿಕ ಕಾಳಜಿಯ ಮೇಲೆ ಬೆಳಕು ಚೆಲ್ಲುತ್ತದೆ. 10ನೇ ಶತಮಾನದ ಚೋಳರ ಆಳ್ವಿಕೆಯ ಕಾಲದಲ್ಲಿ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠವು ಸ್ಥಾಪನೆಗೊಂಡಿತೆಂಬುದಕ್ಕೆ ನೂರಾರು ವರ್ಷಗಳ ಇತಿಹಾಸವನ್ನು ಹೊಂದಿದೆ. ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳು ಸುತ್ತೂರು ಶ್ರೀಮಠದ ಸಂಸ್ಥಾಪಕರು. ಶ್ರೀಮಠದ ಸ್ಥಾಪನೆ ಮಾಡಿದ ಆದಿಜಗದ್ಗುರುಗಳು ಯುದ್ಧ ಸನ್ನದ್ಧವಾಗಿದ್ದ ಸಾಮ್ರಾಜ್ಯಗಳ ನಡುವೆ ಸೌಹಾರ್ದತೆ ಮತ್ತು ಶಾಂತಿಯನ್ನು ಮೂಡಿಸಿದರು. ಅನಂತರ ಬಂದ ಎಲ್ಲ ಜಗದ್ಗುರುಗಳೂ ಸಮಾಜದ ಸರ್ವತೋಮುಖ ಪ್ರಗತಿಗೆ ಶ್ರಮಿಸಿದ್ದಾರೆ.

**ಐತಿಹಾಸಿಕ ಹಿನ್ನೆಲೆ**

ಸುತ್ತೂರು ಶ್ರೀಮಠದ ಸ್ಥಾಪನೆಯ ಹಿನ್ನೆಲೆಯಲ್ಲಿ ಒಂದು ಮಹತ್ತರವಾದ ಐತಿಹಾಸಿಕ ಘಟನೆಯಿದೆ. ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರು ಕಪಿಲಾ ನದಿಯ ನಡುವೆ ಬಂಡೆಯೊಂದರ ಮೇಲೆ ಕುಳಿತು ಧ್ಯಾನಸ್ಥರಾಗಿದ್ದರು. ಚೋಳ ಚಕ್ರವರ್ತಿ ರಾಜರಾಜ ಚೋಳನು ತಲಕಾಡಿನ ಗಂಗರ ಅರಸ ನಾಲ್ಕನೇ ರಾಚಮಲ್ಲನ ವಿರುದ್ಧ ಯುದ್ಧಕ್ಕೆ ಸನ್ನದ್ಧನಾಗಿ ಹೊರಟಿದ್ದ. ಆಗ ರಾಜರಾಜನ ಕುದುರೆ ಇದ್ದಕ್ಕಿದ್ದಂತೆ ಹಾದಿಯನ್ನು ಬದಲಿಸಿ ಧ್ಯಾನನಿರತರಾಗಿದ್ದ ಶಿವಯೋಗಿಗಳವರಿದ್ದ ಸ್ಥಳಕ್ಕೆ ಬಂದು ನಿಂತಿತು.

## About Jagadguru Sri Veerasimhasana Mahasamsthana Math

Jagadguru Sri Veerasimhasana Mahasamsthana Math, popularly known as Sri Suttur Math, is a phenomenal movement that promotes social and economic justice based on its spiritual values and ideals.

Suttur, known historically as "Shrotriyooru and Pradakshinapura", is a village situated on the banks of the River Kapila in Nanjangud Tq., Mysuru Dist. It is located at a distance of around 170 km from Bengaluru and 28 km south of Mysuru on NH 766, near Varuna. SH 84, which connects Nanjangud and T. Narasipura, passes through Suttur. The holy shrine of Adi Jagadguru Sri Shivarathreeshwara Shivayogi Mahaswamiji is the main shrine at Suttur. Thousands of devotees visit this holy place throughout the year.

The influence of the Srimath's activities has spread beyond this small historical village of Suttur, within and beyond the boundaries of Karnataka and even to the distant shores of other countries.

The lineage of the Srimath brings to light the unwavering societal concern of its pontiffs. The inscriptional pieces of evidence support the establishment of Jagadguru Sri Veerasimhasana Mahasamsthana Math at Suttur Srikshetra during the reign of the Chola kingdom in the 10th Century CE. The luminous tradition handed down through centuries indicates that Jagadguru Sri Shivarathreeshwara Shivayogi Mahaswamiji is the founder of Sri Suttur Math. If the founding of the Srimath was incidental for establishing harmony and peace between the two warring factions of the region by its founder, the pontiffs who succeeded saw purpose in promoting the overall development of society.

**The Genesis:**

The founding of the Srimath can be traced to a fascinating historical event. When Adi Jagadguru Sri Shivarathreeshwara Shivayogi Mahaswamiji was doing penance on a rock in the middle of the Kapila River, King Rajaraja of the Chola dynasty, who was on his way to fight a war with King Rachamalla IV of the Gangas of Talakad, was passing nearby. At this point, King Rajaraja's horse changed direction and brought him to the place where Adi Jagadguru Sri Shivarathreeshwara Shivayogi Mahaswamiji was doing penance. Sri Shivarathreeshwara Shivayogi Mahaswamiji made the King Rajaraja realise the futility of war. The King heeded to the words of Sri Shivayogi Mahaswamiji and thus ended the hostility between Rachamalla IV of the Gangas of Talakad and Rajaraja of the Cholas, which was about to break up into a large-scale war. The two kings became friends and later, at the request of King Rajaraja, the seer graciously consented to establish a Math on the banks of the River Kapila at Suttur.

**The Lineage:**

For centuries, the illustrious Jagadguru of Sri Suttur Math have been showering society with boundless blessings through their profound spiritual wisdom and selfless

ಶ್ರೀ ಶಿವರಾತ್ರೀಶ್ವರರು ಯುದ್ಧದಿಂದ ಆಗುವ ಅನಾಹುತಗಳು, ಸಾವುನೋವುಗಳ ಬಗ್ಗೆ ರಾಜರಾಜ ಚೋಳನಿಗೆ ಬುದ್ಧಿವಾದ ಹೇಳಿದರು; ಆತನಿಗೆ ಜ್ಞಾನೋದಯವಾಯಿತು. ತಲಕಾಡಿನ ಗಂಗರು ಹಾಗೂ ಚೋಳರ ನಡುವಿನ ಹಗೆತನ ಕೊನೆಗೊಂಡಿತು. ಎರಡೂ ಸಾಮ್ರಾಜ್ಯಗಳ ನಡುವೆ ನಡೆಯಲಿದ್ದ ಮಹಾಯುದ್ಧ ನಿಂತು ಶಾಂತಿ ನೆಲಸಿತು. ಇಬ್ಬರು ರಾಜರೂ ಸ್ನೇಹಿತರಾದರು. ಅನಂತರ ರಾಜರಾಜನ ಕೋರಿಕೆಯ ಮೇರಿಗೆ ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರು ಸುತ್ತೂರಿನಲ್ಲಿ ಮಠವನ್ನು ಸಂಸ್ಥಾಪಿಸಲು ಅನುಗ್ರಹಿಸಿದರು.

**ಗುರುಪರಂಪರೆ :**

ಸುತ್ತೂರು ಶ್ರೀಮಠದ ಎಲ್ಲ ಜಗದ್ಗುರುಗಳೂ ಆಧ್ಯಾತ್ಮಿಕ ಜ್ಞಾನ ಹಾಗೂ ಸಾಮುದಾಯಿಕ ಸೇವೆಗಳ ಮೂಲಕ ಶತಶತಮಾನಗಳಿಂದಲೂ ಸಮಾಜಕ್ಕೆ ಮಹತ್ತರವಾದ ಕೊಡುಗೆಯನ್ನು ನೀಡುತ್ತಾ ಬಂದಿದ್ದಾರೆ. ಶ್ರೀಮಠದ ಇಂದಿನ ಖ್ಯಾತಿ ಮತ್ತು ಜನಪ್ರೀತಿಗೆ ಗುರುಪರಂಪರೆಯ ಕ್ರಿಯಾಶೀಲತೆ, ಪರಿಶ್ರಮ ಹಾಗೂ ಅದಮ್ಯ ಚೈತನ್ಯಗಳೇ ಕಾರಣವಾಗಿವೆ.

ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರು

ಜಗದ್ಗುರು ಶ್ರೀ ಈಶಾನೇಶ್ವರ ಒಡೆಯರೆ ಮಹಾಸ್ವಾಮಿಗಳವರು

ಜಗದ್ಗುರು ಶ್ರೀ ನಿಜಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರು

ಜಗದ್ಗುರು ಶ್ರೀ ಸಿದ್ಧನಂಜ ದೇಶಿಕೇಂದ್ರ ಮಹಾಸ್ವಾಮಿಗಳವರು

ಜಗದ್ಗುರು ಶ್ರೀ ಕಪಿನಿ ನಂಜುಂಡ ದೇಶಿಕೇಂದ್ರ ಮಹಾಸ್ವಾಮಿಗಳವರು

ಜಗದ್ಗುರು ಶ್ರೀ ಚನ್ನವೀರ ದೇಶಿಕೇಂದ್ರ ಮಹಾಸ್ವಾಮಿಗಳವರು

ಜಗದ್ಗುರು ಶ್ರೀ ಸಿದ್ಧಮಲ್ಲ ಶಿವಾಚಾರ್ಯ ಮಹಾಸ್ವಾಮಿಗಳವರು

ಜಗದ್ಗುರು ಶ್ರೀ ಪರ್ವತೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರು

ಜಗದ್ಗುರು ಶ್ರೀ ಭಂಡಾರಿ ಬಸಪ್ಪ ಒಡೆಯರ್ ಮಹಾಸ್ವಾಮಿಗಳವರು

ಜಗದ್ಗುರು ಶ್ರೀ ಕೂಗಲೂರು ನಂಜುಂಡ ದೇಶಿಕೇಂದ್ರ ಮಹಾಸ್ವಾಮಿಗಳವರು

ಜಗದ್ಗುರು ಶ್ರೀ ಘನಲಿಂಗ ಶಿವಯೋಗಿ ಮಹಾಸ್ವಾಮಿಗಳವರು

ಜಗದ್ಗುರು ಶ್ರೀ ಇಮ್ಮಡಿ ಶಿವರಾತ್ರೀಶ್ವರ ಮಹಾಸ್ವಾಮಿಗಳವರು

ಜಗದ್ಗುರು ಶ್ರೀ ಚನ್ನಬಸವ ದೇಶಿಕೇಂದ್ರ ಮಹಾಸ್ವಾಮಿಗಳವರು

ಜಗದ್ಗುರು ಶ್ರೀ ಗುರುನಂಜ ದೇಶಿಕೇಂದ್ರ ಮಹಾಸ್ವಾಮಿಗಳವರು

ಜಗದ್ಗುರು ಶ್ರೀ ಗುರುಚನ್ನಬಸವ ಶಿವಾಚಾರ್ಯ ಮಹಾಸ್ವಾಮಿಗಳವರು

ಜಗದ್ಗುರು ಶ್ರೀ ಗುರುಪಂಚಾಕ್ಷರ ದೇಶಿಕೇಂದ್ರ ಮಹಾಸ್ವಾಮಿಗಳವರು

ಜಗದ್ಗುರು ಶ್ರೀ ಚಿದ್ಘನ ಶಿವಾಚಾರ್ಯ ಮಹಾಸ್ವಾಮಿಗಳವರು

ಜಗದ್ಗುರು ಶ್ರೀ ಚನ್ನವೀರ ದೇಶಿಕೇಂದ್ರ ಮಹಾಸ್ವಾಮಿಗಳವರು

ಜಗದ್ಗುರು ಶ್ರೀ ಮಹಾಂತ ದೇಶಿಕೇಂದ್ರ ಮಹಾಸ್ವಾಮಿಗಳವರು

ಜಗದ್ಗುರು ಶ್ರೀ ಸಿದ್ಧಮಲ್ಲ ಶಿವಾಚಾರ್ಯ ಮಹಾಸ್ವಾಮಿಗಳವರು

ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು

ಜಗದ್ಗುರು ಮಂತ್ರಮಹರ್ಷಿ ಶ್ರೀ ಶಿವರಾತ್ರೀಶ್ವರ ಮಹಾಸ್ವಾಮಿಗಳವರು

ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು

ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು (ಪ್ರಸ್ತುತ ಪೀಠಾಧಿಪತಿಗಳು)

community service. The reverence that Sri Suttur Math has earned today is the result of their initiatives, efforts and actions.

Founded by the Adi Jagadguru Sri Shivarathreeshwara Shivayogi, every revered pontiff in this sacred lineage has devotedly offered their unique and invaluable contributions to the realms of religion, society and education. With unwavering commitment, they have worked day and night for the upliftment and transformation of the society.

In particular, the 23rd Pontiff — the embodiment of Kayaka and Trividha Dasoha, the illustrious Rajagurutilaka Paramapujya Jagadguru Dr. Sri Shivarathri Rajendra Mahaswamiji, elevated the service activities of the Math to sublime heights, spreading its glory far and wide.

Following the sacred and luminous footsteps of his revered predecessor, Paramapujya Jagadguru Sri Shivarathri Deshikendra Mahaswamiji ascended the divine seat as the 24th Jagadguru in the year 1986. With his extraordinary foresight, boundless vision and remarkable capabilities, he has steered JSS Mahavidyapeetha towards unparalleled excellence. By providing world-class educational facilities and igniting the young minds with the light of fresh horizons of knowledge, he has masterfully transformed it into a magnificent, unparalleled institution — a shining beacon of social, educational and cultural renaissance.

Adi Jagadguru Sri Shivarathreeshwara Shivayogi

Jagadguru Sri Ishaneshwara Wodeyare Mahaswamiji

Jagadguru Sri Nijalinga Shivacharya Mahaswamiji

Jagadguru Sri Siddananja Deshikendra Mahaswamiji

Jagadguru Sri Kapini Nanjunda Deshikendra Mahaswamiji

Jagadguru Sri Channaveera Deshikendra Mahaswamiji

Jagadguru Sri Siddhamalla Shivacharya Mahaswamiji

Jagadguru Sri Parvatendra Shivacharya Mahaswamiji

Jagadguru Sri Bhandari Basappa Wodeyar Mahaswamiji

Jagadguru Sri Koogaluru Nanjunda Deshikendra Mahaswamiji

Jagadguru Sri Ghanlinga Shivayogi Mahaswamiji

Jagadguru Sri Immadi Shivarathreeshwara Mahaswamiji

Jagadguru Sri Channabasava Deshikendra Mahaswamiji

Jagadguru Sri Gurunanja Deshikendra Mahaswamiji

Jagadguru Sri Guruchannabasava Shivacharya Mahaswamiji

Jagadguru Sri Gurupanchakshara Deshikendra Mahaswamiji

Jagadguru Sri Chidghana Shivacharya Mahaswamiji

Jagadguru Sri Channaveera Deshikendra Mahaswamiji

Jagadguru Sri Mahanta Deshikendra Mahaswami

Jagadguru Sri Siddamalla Shivacharya Mahaswami

Jagadguru Sri Shivaratri Deshikendra Mahaswamiji

Jagadguru Mantramaharshi Sri Shivarathreeshwara Mahaswamiji

Jagadguru Dr. Sri Shivarathri Rajendra Mahaswamiji

Jagadguru Sri Shivaratri Deshikendra Mahaswamiji

(Current Heads)



## ಪರಮಪೂಜ್ಯ ಜಗದ್ಗುರು ರಾಜಗುರುತಿಲಕ
## ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು

ಸುತ್ತೂರು ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠದ ಇಪ್ಪತ್ಮೂರನೆಯ ಜಗದ್ಗುರುಗಳಾದ ಪರಮಪೂಜ್ಯ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಶ್ರೀಮಠದ ಕಾರ್ಯವ್ಯಾಪ್ತಿಯನ್ನು ಅಭೂತಪೂರ್ವವಾಗಿ ವಿಸ್ತರಿಸಿದವರು. ದಿನಾಂಕ 29.8.1916 ರಂದು ಜನಿಸಿದ ಪರಮಪೂಜ್ಯರು 28.2.1928ರಲ್ಲಿ ಪೀಠಾರೋಹಣ ಮಾಡಿದರು. ಪೂಜ್ಯರು ಶ್ರೀ ಪೀಠದ ಗುರು ಪರಂಪರೆಯ ಜ್ಞಾನಶಕ್ತಿ, ತಪಶಕ್ತಿ ಹಾಗೂ ಕ್ರಿಯಾಶಕ್ತಿಗಳೆಲ್ಲವೂ ಏಕೀಭವಿಸಿದಂತಹ ಮಹಾನ್ ಚೇತನವಾಗಿದ್ದರು. ಸಮಾಜದ ಎಲ್ಲ ಜ್ವಲಂತ ಸಮಸ್ಯೆಗಳಿಗೂ ಶಿಕ್ಷಣವೇ ಪರಿಹಾರ ಎನ್ನುವುದನ್ನು ಅರಿತಿದ್ದ ಶ್ರೀಗಳವರು ಉಚಿತ ಪ್ರಸಾದನಿಲಯಗಳನ್ನು ಮತ್ತು ಶಾಲಾಕಾಲೇಜುಗಳನ್ನು ಪ್ರಾರಂಭಿಸುವ ಮೂಲಕ ಗ್ರಾಮೀಣ ಯುವಜನತೆಯನ್ನು ಅಕ್ಷರಸಂಸ್ಕೃತಿಯ ಕಡೆಗೆ ಸೆಳೆದರು. ಸ್ವಾತಂತ್ರಪೂರ್ವದ ದಿನಮಾನಗಳಲ್ಲಿ ಅದು ಸಾಮಾನ್ಯವಾದ ವಿಷಯವಾಗಿರಲಿಲ್ಲ. ಕಾಯಕತಪಸ್ವಿಗಳಾದ ಪೂಜ್ಯರು ತಮ್ಮ ಅಪೂರ್ವ ಧೀಶಕ್ತಿಯಿಂದ ಇಂಥ ಅಸಾಧ್ಯವಾದ ಕೆಲಸವನ್ನು ಸಾಧ್ಯವಾಗಿಸಿದರು. ನಾಡಿನ ಜನಸ್ತೋಮದ ಪಾಲಿಗೆ ಕಲ್ಪವೃಕ್ಷವಾದರು. ಅವರು ಬೆಳಗಿದ ಜ್ಞಾನಜ್ಯೋತಿಯ ಹಿನ್ನಲೆಯಲ್ಲಿ ನಾಡು ಹೊಸ ಬೆಳಕಿಗೆ ತನ್ನನ್ನು ತೆರೆದುಕೊಂಡಿತು. ಅನ್ನ, ಅರಿವು, ಆರೋಗ್ಯ, ಕಲೆ, ಸಾಹಿತ್ಯ, ಸಂಗೀತ, ಸಮಾಜಸುಧಾರಣೆ, ಧರ್ಮಜಾಗೃತಿ ಮೊದಲಾಗಿ ಶ್ರೀಮಠವು ಇಂದು ಹಮ್ಮಿಕೊಂಡಿರುವ ಎಲ್ಲಾ ರೀತಿಯ ಸೇವಾ ಚಟುವಟಿಕೆಗಳಿಗೆ ಭದ್ರಬುನಾದಿ ಹಾಕಿದ ದ್ರಷ್ಟಾರರು ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು, ಆ ವಿರಾಟ್ ಚೇತನದ ನೆನಪು ಇಂದಿಗೂ ಜನತೆಯಲ್ಲಿ ಕರ್ತೃತ್ವಶಕ್ತಿಯನ್ನು ಮೂಡಿಸುವ ದಿವ್ಯಮಂತ್ರವಾಗಿದೆ.

## His Holiness Jagadguru
## Dr. Sri. Shivarathri Rajendra Mahaswamiji

His Holiness Jagadguru Dr. Sri. Shivarathri Rajendra Mahaswamiji, the 23rd Pontiff of Sri Jagadguru Veerasimhasana Mahasamsthana Math, popularly known as Sri Suttur Math, inherited the legacy of the 10th century old Srimath at an early age. Born on 29.8.1916 His Holiness ascended the Peetha on 28.2.1928 when he was hardly twelve. He shared the responsibilities with his senior, Jagadguru Pattada Shivarathri Mahaswamigalu. He shouldered the responsibilities of the Srimath for more than half a century, taking each step towards serving of humanity in every possible way.

Besides being the patron of arts, literature and music, he was a scholar in Kannada and Sanskrit. He sacrificed his educational career to provide succor to the helpless poor. The burning desire to assuage the educational needs of hundreds of rural children, prompted His Holiness to start the first free hostel at Mysore in 1941. Thus began his journey of socioeconomic transformation of the region with the establishment of Schools, Colleges and Sanskrit Pathashalas in and around Mysore. A single-minded dedication, aimed at welfare of all, prompted him to tread the path of sacrifice. Jagadguru Dr. Shivarathri Rajendra Mahaswamiji had a strong vision of starting educational institutions in rural areas considering the hardship of students coming to cities seeking education. In order to make this possible, he started the Jagadguru Sri Shivarathreeshwara Mahavidyapeetha in 1954. Under the untiring efforts of Jagadguru Sri Shivarthreeshwara Rajendra Mahaswamiji, the Vidyapeetha has witnessed enormous growth in the field of education. Thousands of children, men and women have found solace under his boundless compassion.

# ಜೆಎಸ್ಎಸ್ ಮಹಾವಿದ್ಯಾಪೀಠ, ಮೈಸೂರು




ಐತಿಹಾಸಿಕ ಮಹತ್ವವುಳ್ಳ ಕಾವೇರಿ ನದಿಯ ಮುಖ್ಯ ಉಪನದಿಗಳಲ್ಲೊಂದಾದ ಕಪಿಲೆಯ ಪ್ರಶಾಂತ ವಾತಾವರಣದಲ್ಲಿ ಸುಮಾರು ಸಾವಿರ ವರ್ಷಗಳ ಹಿಂದೆ ಆದಿ ಜಗದ್ಗುರು **ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳು** ಅಧ್ಯಾತ್ಮಿಕ ಪರಂಪರೆ ಹಾಗೂ ಮೌಲ್ಯಯುತ ಆದರ್ಶಗಳಿಗಾಗಿ ಸುತ್ತೂರು ಶ್ರೀಕ್ಷೇತ್ರದಲ್ಲಿ ವೀರಸಿಂಹಾಸನ ಮಠವನ್ನು ಸ್ಥಾಪಿಸುವುದರ ಮೂಲಕ ಸಮಾಜದ ಸರ್ವತೋಮುಖ ಉನ್ನತಿಗೆ ಕಾರಣರಾದರು. ಅಲ್ಲದೇ ಮುಂದಿನ ಜಗದ್ಗುರು ಪರಂಪರೆಗೆ ಮೊದಲ ಹೆಜ್ಜೆಗುರುತಾದರು. ಶ್ರೀ ಸುತ್ತೂರು ಕ್ಷೇತ್ರ ಇಂದಿಗೂ ಧಾರ್ಮಿಕ ಮತ್ತು ಅಧ್ಯಾತ್ಮಿಕ ಕರ್ಮಭೂಮಿಯ ಪವಿತ್ರ ನೆಲೆವೀಡಾಗಿದೆ. ಜ್ಞಾನದೇಗುಲಗಳನ್ನು ಸ್ಥಾಪಿಸುವ ಮೂಲಕ ಸಾಂಸ್ಕೃತಿಕ, ಸಾಹಿತ್ಯಕ, ಧಾರ್ಮಿಕ, ಶೈಕ್ಷಣಿಕ, ಆರ್ಥಿಕ ಮತ್ತು ಸಾಮಾಜಿಕ ಏಳ್ಗೆಯ ಕೇಂದ್ರವಾಗಿದೆ.

ಪ್ರಾತಃಸ್ಮರಣೀಯರೂ, ತ್ರಿವಿಧ ದಾಸೋಹಿಗಳೂ, ಜ್ಞಾನಗಂಗೆಯ ಹರಿಕಾರರೂ, ನಾಡಿನ ಸಮಾಜೋದ್ಧಾರಕ್ಕಾಗಿ ಅಹರ್ನಿಶಿ ಶ್ರಮಿಸಿ ಕನ್ನಡ ನಾಡಿನ ಮನೆ ಮನಗಳಲ್ಲಿ ಸದಾ ಸ್ಮರಣೀಯರೂ ಆದ ಪರಮಪೂಜ್ಯ ಜಗದ್ಗುರುಗಳವರಾದ **ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿ**ಗಳವರ ಮಾರ್ಗದರ್ಶನದಲ್ಲಿ 1954ರಲ್ಲಿ ವಿದ್ಯುಕ್ತವಾಗಿ ಸ್ಥಾಪನೆಗೊಂಡ ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾವಿದ್ಯಾಪೀಠವು ನಾಡಿನ ಜನತೆಯ ಭವಿಷ್ಯವನ್ನು ಉತ್ತಮಗೊಳಿಸುವ ದಿಕ್ಕಿನಲ್ಲಿ ತನ್ನನ್ನು ಸಮರ್ಪಿಸಿಕೊಂಡಿದೆ. ಇದು ಒಂದು ಸಾಮಾಜಿಕ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಸಂಸ್ಥೆಯಾಗಿ ಬೆಳೆಯುತ್ತಿದ್ದು ಜನಸಾಮಾನ್ಯರ ಬದುಕನ್ನು ಸುಧಾರಿಸಲು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ತನ್ನ ಮುನ್ನೂರೈವತ್ತಕ್ಕೂ ಹೆಚ್ಚು ಸಂಸ್ಥೆಗಳ ಮೂಲಕ ಸುಮಾರು ಒಂದು ಲಕ್ಷ ವಿದ್ಯಾರ್ಥಿಗಳಿಗೆ ಶಿಕ್ಷಣ ಸೌಲಭ್ಯವನ್ನು ಒದಗಿಸಿಕೊಡುತ್ತಾ ಲಕ್ಷಾಂತರ ಮಂದಿಯ ಬದುಕಿನ ಮೇಲೆ ತನ್ನ ಪ್ರಭಾವ ಬೀರಿದೆ. ಸುಮಾರು ಆರು ದಶಕಗಳ ಹಿಂದೆ ಸಣ್ಣ ಪ್ರಮಾಣದಲ್ಲಿ ಆರಂಭಗೊಂಡ ಜೆಎಸ್ಎಸ್ ಮಹಾವಿದ್ಯಾಪೀಠ ಇಂದು ಒಂದು ಬೃಹತ್ ಸಾಮಾಜಿಕ ಶಕ್ತಿಯಾಗಿ ರೂಪುಗೊಂಡು ಭೌಗೋಳಿಕ ಮತ್ತು ಸಾಂಸ್ಕೃತಿಕ ಮೇರೆಗಳನ್ನು ದಾಟಿ ಮುನ್ನಡೆದಿದೆ. ಶಿಶುವಿಹಾರದಿಂದ ಸ್ನಾತಕೋತ್ತರ ಶಿಕ್ಷಣದವರೆಗಿನ ವಿದ್ಯಾಸಂಸ್ಥೆಗಳು, ವೃದ್ಧಾಶ್ರಮ, ವಿಶೇಷಚೇತನರು, ವಿಶೇಷಚೇತನ ಮಕ್ಕಳಶಾಲೆ, ಗ್ರಾಮೀಣಾಭಿವೃದ್ಧಿ ಕೇಂದ್ರಗಳು, ಅನಾಥಾಲಯಗಳು, ವೃತ್ತಿಶಿಕ್ಷಣ ಕೇಂದ್ರಗಳು, ವಿಶ್ವವಿದ್ಯಾನಿಲಯ ಮುಂತಾದ ಶೈಕ್ಷಣಿಕ ಹಾಗೂ ಸಾಮಾಜಿಕ ಮುನ್ನಡೆಯ ದ್ಯೋತಕಗಳಾಗಿವೆ. ಜೆಎಸ್ಎಸ್ ಮಹಾವಿದ್ಯಾಪೀಠ ಶೈಕ್ಷಣಿಕ ಸಂಸ್ಥೆಗಳ ಮೂಲಕ ಕರ್ನಾಟಕದಲ್ಲಷ್ಟೇ ಅಲ್ಲದೆ ತಮಿಳುನಾಡು, ಉತ್ತರಪ್ರದೇಶ, ಜಮ್ಮು ಮತ್ತು ಅಮೆರಿಕಾ, ಮಾರಿಷಸ್, ದುಬೈ ಮುಂತಾದೆಡೆಗಳಲ್ಲಿ ಸೇವೆಯನ್ನು ಸಲ್ಲಿಸುತ್ತಿದೆ.

In the sylvan surrounding of Kapila, a tributary of the legendary Cauvery, there arose in the spiritual firmament a thousand years ago, a Sage, **Adi Jagadguru Sri Shivarathreeshwara Shivayogigalu,** whose divine imprints on the sands of time have inspired and led the successive pontiffs towards the upliftment of society, in all aspects. The Sage founded Jagadguru Sri Veerasimhasana Math at Sutturu, 28 kms South of Mysore, to propagate the message of Dharma and inculcate Dharmik qualities in the minds of people. Although the primary objective of founding the Sri Math was to lead the people on the path of righteousness, with the passage of time, the Sri Math has attuned itself to the demands of time and acquired a multidimensional approach, to the societal upliftment. The Math has transformed itself into a center of cultural, religious, educational, economic and social enrichment, culminating in acquiring a multifarious facet.

**Jagadguru Dr. Sri Shivarathri Rajendra Mahaswamiji,** the 23rd pontiff of Sri Math, founded JSS Mahavidyapeetha in 1954, with the objective of carrying forward the torch of knowledge to all sections of the population, including women and weaker sections. JSS Mahavidyapeetha now administers more than 300 institutions, covering the entire gamut of education including general, technical and medical. Jss Mahavidyapeetha has heralded a silent revolution by taking education to the doorstep of common people. Every year new establishment of learning enjoin the fold of JSS Mahaviyapeetha making education more need based and tailor made for the demands of time.

The present pontiff, **Jagadguru Sri Shivarathri Deshikendra Mahaswamiji,** the 24th head of the holy seat, is precision and perfection personified. His Holiness has been successfully carrying the onerous responsibility ascribed upon him by his illustriuous predecessor. Being a progressive thinker and a zealous

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು** 1986ರಲ್ಲಿ ಇಪ್ಪತ್ತನಾಲ್ಕನೆಯ ಜಗದ್ಗುರುಗಳಾಗಿ ಶ್ರೀಮಠದ ಪೀಠಾರೋಹಣ ಮಾಡಿದ ನಂತರ ತಮ್ಮ ಅಸಾಧಾರಣ ಮುನ್ನೋಟ ಮತ್ತು ಸಾಮರ್ಥ್ಯದಿಂದ ಜೆಎಸ್‌ಎಸ್ ಮಹಾವಿದ್ಯಾಪೀಠವನ್ನು ಅತ್ಯುತ್ತಮ ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸುವ ಮತ್ತು ಹೊಸ ಹೊಸ ಜ್ಞಾನದಿಗಂತಗಳತ್ತ ಯುವಜನರ ಮನಸ್ಸುಗಳನ್ನು ಸೆಳೆಯುವತ್ತ ಕಾರ್ಯಶೀಲರಾಗಿರುವ ಜೊತೆಗೆ ಅದನ್ನು ಒಂದು ಅದ್ವಿತೀಯ ಹಾಗೂ ಅಗ್ರಪಂಕ್ತಿಯ ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಸಂಸ್ಥೆಯಾಗಿಸುವಲ್ಲಿ ಅದ್ಭುತ ಯಶಸ್ಸು ಕಂಡಿದ್ದಾರೆ. ಉತ್ತರ ಕರ್ನಾಟಕದಲ್ಲಿ ಸಂಭವಿಸಿದ ನೆರೆಹಾವಳಿಯಿಂದ ತತ್ತರಿಸುತ್ತಿದ್ದ ಜನರ ಸಹಾಯಕ್ಕಾಗಿ "ಮೈಸೂರು ನಾಗರಿಕ ವೇದಿಕೆಯನ್ನು" ಸ್ಥಾಪಿಸಿ ಅವರಿಗೆ ಸಾಮಾಜಿಕ ಹಾಗೂ ಆರ್ಥಿಕ ಭದ್ರತೆಯ ಆಶಾಕಿರಣವಾಗಿ, ಲಕ್ಷಾಂತರ ಜನರ ಬದುಕಿನ ದಾರಿದೀಪವಾಗಿ ಮೊದಲಿನ ಬದುಕಿಗೆ ಮರಳಬಹುದೆಂಬ ಭರವಸೆಯ ಬೆಳಕಾಗಿದ್ದಾರೆ.

ಕೊವಿಡ್–19 ಸಾಂಕ್ರಾಮಿಕ ರೋಗ ಪೀಡಿತ ಸಮಯದಲ್ಲಿ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿಯವರು ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಉದಾರ ದೇಣಿಗೆ ನೀಡಿದರು. ಸುತ್ತೂರು ಶ್ರೀ ಮಠವು ನಗರದಲ್ಲಿ ಸಂಕಷ್ಟಕ್ಕೊಳಗಾದವರಿಗೆ ಆಹಾರವನ್ನು ವಿತರಿಸಿ ತನ್ನ ಸಂಪ್ರದಾಯವನ್ನು ಮುಂದುವರಿಸಿಕೊಂಡು ಬರುತ್ತಿದೆ.

reformist, he is relentlessly striving to empower JSS Mahavidyapeetha to meet the challenges of the present century. His Holiness is mercurial in responding to the sufferings of the multitude. Swamiji took the initiative, voluntarily, in mobilizing monetary and material support, by initiating 'Mysore Citizen Forum' to the flood victims of North Karnataka. His Holiness extended Sri Math's Philanthropic work by generously offering monetary support to the flood ravaged victims of Madikeri in Karnataka and Kerala State. His timely initiative offered solace and brought hopes back to the lives of millions in North Karnataka and Kerala.

During the Covid-19 Pandemic period, Sri Math generously contributed to Chief Minister Relief fund which provided much relief to the people in distress. Under the able guidance of His Holiness, the offshoots of JSS Mahavidyapeetha have spread beyond the shores of the nation. Truly, JSS Mahavidyapeetha is touching the lives of mankind in myriad ways.

## Governing Body

### Chairperson

His Holiness Jagadguru

**Sri Shivarathri Deshikendra Mahaswamiji**

President, JSS Mahavidyapeetha, Mysuru

### Members

**Dr. C G Betsurmath**
Executive Secretary
JSS Mahavidyapeetha, Mysuru

**Prof. R. Morabada Mallikarjuna**
Director, College Education Division
JSS Mahavidyapeetha, Mysuru

**Prof. G. Hemanth Kumar**
Former Vice Chancellor
University of Mysore, Mysuru

**Prof. A. P. Gnana Prakash**
Dos in Physics
University of Mysore, Mysuru

### Industrialist

**Sri. Mahalingeshwar S Dhaded**
Associate Vice President
Infosys, Mysuru

### State Govt. Nominee

Joint Director
Regional Office
Dept of Collegiate Education
Mysuru

### University Nominee

**Prof. H. S. Aparna**
DoS in Biotechnology
University of Mysore, Mysuru

### Principal Nominee

**Sri. M. M. Swamy**
Controller of Examinations

### Principal

**Dr. Rechanna**
Principal

### Special Invitee

**Sri. Niranjan Murthy B**
Assistant Director
College Education Division
JSS Mahavidyapeetha, Mysuru



ಜೆಎಸ್‌ಎಸ್ ಮಹಿಳಾ ಕಾಲೇಜು (ಸ್ವಾಯತ್ತ)

ದೃಷ್ಟಿ : ಉತ್ಕೃಷ್ಟ ಶಿಕ್ಷಣದ ಮೂಲಕ ಮಹಿಳಾ ಸಬಲೀಕರಣಕ್ಕೆ ಒತ್ತು ನೀಡುವುದು.

ಗುರಿ : ಮಹಿಳೆಯರ ಸಾಮಾಜಿಕ ಸ್ಥಾನಮಾನಕ್ಕಾಗಿ ಸಮಾನತೆಯನ್ನು ಕಲ್ಪಿಸುವುದು. ಮಹಿಳೆಯರು ಸಾಂಸ್ಕೃತಿಕವಾಗಿ ತಮ್ಮದೇ ಆದ ಛಾಪು ಮೂಡಿಸಲು ಉತ್ತೇಜಿಸುವುದು.

ಮಹಿಳೆಯರಿಗೆ ನಮ್ಮ ಶ್ರೀಮಂತ ಸಾಂಸ್ಕೃತಿಕ ಪರಂಪರೆಯ ಅರಿವು ಮೂಡಿಸುವುದು.

ಮಹಿಳೆಯರನ್ನು ಉತ್ತಮ ಸಂವಹನ ಕೌಶಲದ ಮೂಲಕ ಜಾಗತಿಕ ಸ್ಪರ್ಧೆಗೆ ಸಮರ್ಥಗೊಳಿಸುವುದು

ಕಾಲೇಜು ತನ್ನ ಗುರಿಯನ್ನು ಪರಿಣಾಮಕಾರಿಯಾಗಿ ಸಾಧಿಸಲು 20 ವರ್ಷಗಳವರೆಗಿನ ದೂರದೃಷ್ಟಿಯನ್ನು ಹೊಂದಿದ ಸಮಗ್ರ ಕ್ರಿಯಾಯೋಜನೆಯನ್ನು ಹೊಂದಿರುತ್ತದೆ. ಈ ಕ್ರಿಯಾ ಯೋಜನೆಯು ಸಾಕಾರಗೊಳ್ಳಲು ಕಾರ್ಯತಂತ್ರ ರೂಪಿತಗೊಂಡಿದೆ. ಈ ಯೋಜನೆಯಿಂದ ಕಾಲೇಜು ತನ್ನ ಗುರಿಯನ್ನು ತಲುಪಲು ಸಾಧ್ಯವಾಗುತ್ತದೆ.

ಈ ವಿಶಾಲ ಯೋಜನೆಯನ್ನು ಹಲವು ಯೋಜನೆಗಳಾಗಿ ವಿಂಗಡಿಸಲಾಗಿದೆ. ಈ ಯೋಜನೆಗಳು ಕಾಲೇಜು ಮಟ್ಟದಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ಮುಂದಿನ ಐದು ವರ್ಷಗಳಲ್ಲಿ ವಾಸ್ತವಿಕ ಹಾಗೂ ಪ್ರಾಯೋಗಿಕವಾಗಿ ಸಫಲತೆಯನ್ನು ಹೊಂದುವ ದಾರಿಯಲ್ಲಿ ಕಾರ್ಯನಿರ್ವಹಿಸುತ್ತಿದೆ.

ಈ ಕಾರ್ಯಕ್ರಮಗಳಿಗೆ ಹೆಚ್ಚು ಗಮನಹರಿಸಲು ಚತುರ್ಮಾಸ ಪದ್ಧತಿಗನುಗುಣವಾಗಿ ಶೈಕ್ಷಣಿಕ ಯೋಜನೆಗಳನ್ನು ರೂಪಿಸಲಾಗಿದೆ. ಚತುರ್ಮಾಸ ಯೋಜನೆಯನ್ನು ವಿಭಾಗ ಹಾಗೂ ಅಧ್ಯಾಪಕರ ವಲಯದಲ್ಲಿ ಪಠ್ಯ ಯೋಜನೆಗಳಾಗಿ ರೂಪಿಸಲಾಗಿದೆ. ಈ ಪಠ್ಯ ಕ್ರಮಗಳು ನಿರ್ದಿಷ್ಟ ಹಾಗೂ ಉತ್ತಮ ಫಲಿತಾಂಶವನ್ನು ನೀಡುವಲ್ಲಿ ಸಹಕಾರಿಯಾಗಿವೆ ಹಾಗೂ ಪರಿಣಾಮಕಾರಿ ಬೋಧನೆ ಮತ್ತು ಕಲಿಕೆಯ ಮುಖಾಂತರ ಕಾಲೇಜಿನ ದೃಷ್ಟಿ ಮತ್ತು ಗುರಿಯನ್ನು ತಲುಪಲು ಸಾಧ್ಯವಾಗಿದೆ.

ಕಾಲೇಜಿನಲ್ಲಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ (ಸಿಇಟಿ) ಸ್ಥಾಪಿಸಲಾಗಿದೆ. ಈ ತರಬೇತಿ ಕೇಂದ್ರದ ಮೂಲಕ ಸ್ಪರ್ಧಾತ್ಮಕ ಪರೀಕ್ಷೆಗಳಾದ ಐಎಎಸ್, ಕೆಎಎಸ್ ಮತ್ತು ಬ್ಯಾಂಕಿಂಗ್ ಮುಂತಾದ ಪರೀಕ್ಷೆಗಳಿಗೆ ವಿದ್ಯಾರ್ಥಿನಿಯರು ತಯಾರಿ ನಡೆಸಲು ಆಯಾ ಕ್ಷೇತ್ರಗಳಲ್ಲಿ ವಿಶೇಷ ಪರಿಣತಿಯನ್ನು ಹೊಂದಿದವರಿಂದ ತರಬೇತಿಯನ್ನು ನೀಡಲಾಗುತ್ತಿದೆ.

## JSS College for Women (Autonomus)
## Saraswathipuram, Mysuru

### Vision

Empowering Women through Academic Excellence

### Mission

- To achieve social equality as a prerequisite for women emancipation.
- To promote better cultural space for enabling students to foster a distinctive identity of their own.
- To sensitize women towards our rich cultural milieu and ethos.
- Familiarizing students with their Rights, Duties and enabling them in achieving gender parity.

The College envisages a comprehensive action plan to fulfill the Vision of the college. The action plan envisions a strategic plan for the next 20 years. The carefully drawn strategic plan involves methods and approach to fulfill the Vision of the college. The Macro strategic plan is further sliced down to perspective plans. The perspective plans visualize concrete and pragmatic approach for the next five years and operates at the college level.

To make the programs more focused – academic plans are drawn which are basically semester wise. They are further narrowed down to lesson plans at the department level and individual teacher level. The curricula have definite, well defined course outcomes and specific program outcomes. Effective teaching and learning are ensured by such highly focused, sharpened and well drawn academic action plans which finally culminates in fulfilling the Vision and Mission of the college.

Located in the heart of Mysore, the college has been a premier institute of higher learning in the city. Ever since its establishment in 1970, the college has been imparting quality education to all sections of society, especially the weaker and the deprived.

The college has excellent infrastructural facilities like well equipped laboratories, spacious and well lit classrooms, multimedia facilities and library with good collections. Uniquely designed building and landscaped surroundings give the college a pleasing ambience, conducive to learning. The college has an extremely vibrant academic atmosphere, ably supported by extra curricular and extension activities. A team of committed faculty, enthusiastic to help

ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾವಿದ್ಯಾಪೀಠಕ್ಕೆ ನಾಂದಿ ಹಾಡಿದ **ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು** ಮಹಿಳಾ ಶಿಕ್ಷಣದ ಮಹತ್ವವನ್ನು ಅರಿತು 1970ರಲ್ಲಿ ಮೈಸೂರಿನ ಹೃದಯಭಾಗವಾದ ಸರಸ್ವತಿಪುರಂನಲ್ಲಿ ಆರಂಭಿಸಿದ ಜೆಎಸ್‌ಎಸ್ ಮಹಿಳಾ ಕಾಲೇಜು ಅಂದು ಕೇವಲ 28 ವಿದ್ಯಾರ್ಥಿನಿಯರಿಂದ ಪ್ರಾರಂಭವಾಗಿ ತನ್ನ ಐದು ದಶಕಗಳ ಇತಿಹಾಸದಲ್ಲಿ 2000ಕ್ಕೂ ಹೆಚ್ಚು ವಿದ್ಯಾರ್ಥಿನಿಯರನ್ನೊಳಗೊಂಡ ಮಹಾವಿದ್ಯಾಸಂಸ್ಥೆಯಾಗಿ ಬೆಳೆದಿದೆ. ಉತ್ತಮ ಗುಣಮಟ್ಟದ ಶಿಕ್ಷಣ ನೀಡಿ ವಿದ್ಯಾರ್ಥಿನಿಯರ ಸರ್ವತೋಮುಖ ವಿಕಾಸಕ್ಕೆ ಕಾರಣೀ ಭೂತವಾಗಿದೆ.

ಈ ವಿದ್ಯಾಲಯವು ಉತ್ತಮ ಗುಣಮಟ್ಟದ ಅನುಭವಿ ಅಧ್ಯಾಪಕರು, ಕ್ರಿಯಾಶೀಲ ಸಿಬ್ಬಂದಿವರ್ಗ, ಸುಸಜ್ಜಿತ ಪ್ರಯೋಗಾಲಯಗಳು, ವಿಶಾಲವಾದ ಕೊಠಡಿಗಳು, ಗಣಕೀಕೃತ ಗ್ರಂಥಭಂಡಾರ ಮುಂತಾದ ಸೌಲಭ್ಯಗಳನ್ನು ಒಳಗೊಂಡಿದೆ. ನಮ್ಮ ಕಾಲೇಜು ಸುಮಾರು ಎಂಟು ಎಕರೆ ಪ್ರದೇಶದ ಸುಂದರ ಹಸಿರು ತಾಣದಲ್ಲಿದೆ ನಮ್ಮ ಕಾಲೇಜು ರ್‍ಯಾಂಕುಗಳ ಕಣಜವೆಂದೆ ಹೆಸರುಗಳಿಸಿರುವ ನಗರದ ಪ್ರತಿಷ್ಠಿತ ಕಾಲೇಜುಗಳಲ್ಲಿ ಒಂದಾಗಿದೆ. ದೇಹ, ಮನಸ್ಸುಗಳಿಗೆ ಮುದ ನೀಡುವ ಕ್ರೀಡಾ, ಸಾಂಸ್ಕೃತಿಕ ಹಾಗೂ ಸಾಹಿತ್ಯಕ ಚಟುವಟಿಕೆಗಳು ಇಲ್ಲಿ ಮೇಳೈಸಿವೆ. ವಿದ್ಯಾರ್ಥಿನಿಯರ ಶೈಕ್ಷಣಿಕ ಸಮಸ್ಯೆಗಳಿಗೆ ಶಿಕ್ಷಕವೃಂದ ತಕ್ಷಣ ಸ್ಪಂದಿಸಿ ಕಾರ್ಯ ಪ್ರವೃತ್ತವಾಗುತ್ತದೆ.

ಈ ವಿದ್ಯಾಲಯವು ವಿದ್ಯಾರ್ಥಿನಿಯರಲ್ಲಿ ಸುಪ್ತವಾಗಿ ಅಡಗಿರುವ ಪ್ರತಿಭೆಯ ಅನಾವರಣಕ್ಕೆ ಸಾಂಸ್ಕೃತಿಕ ಹಾಗೂ ಸಾಹಿತ್ಯಕ ವೇದಿಕೆಯನ್ನು ನಿರ್ಮಿಸಿದೆ. ಉತ್ತಮ ಗುಣಮಟ್ಟದ ಶೈಕ್ಷಣಿಕ ಸಾಧನೆಯ ಪ್ರಮಾಣವಾಗಿ ರಾಷ್ಟ್ರೀಯ ಮೌಲ್ಯಾಂಕನ ಹಾಗೂ ಪ್ರಶಂಸನಾ ಪರಿಷತ್ತಿನಿಂದ 'A' ದರ್ಜೆ ಮಾನ್ಯತೆ ಹೊಂದಿದ ರಾಷ್ಟ್ರೀಯ ಮಟ್ಟದ ಕಾಲೇಜುಗಳಲ್ಲಿ ಒಂದಾಗಿದೆ.

ಈ ವಿದ್ಯಾಲಯವು ವಿವಿಧ ವಿಷಯಗಳನ್ನು ಒಳಗೊಂಡಿರುವ ಕಲಾವಿಭಾಗ (ಬಿ.ಎ.) ವಿಜ್ಞಾನ ವಿಭಾಗ, (ಬಿ.ಎಸ್.ಸಿ. ಮತ್ತು ಬಿ.ಸಿ.ಎ) ವಾಣಿಜ್ಯ ವಿಭಾಗ (ಬಿ.ಕಾಂ., ಮತ್ತು ಬಿ.ಬಿ.ಎ.) ಗಳನ್ನು ಹೊಂದಿದೆ. ಸ್ನಾತಕೋತ್ತರ ವಿಭಾಗದಲ್ಲಿ ಎಂ.ಎ. (ಅರ್ಥಶಾಸ್ತ್ರ) ಎಂ.ಕಾಂ. ಹಾಗೂ ಎಂ.ಎಸ್ಸಿ ರಸಾಯನಶಾಸ್ತ್ರ ಕೋರ್ಸ್‌ಗಳು ನಡೆಯುತ್ತಿವೆ.

ಈ ವಿದ್ಯಾಲಯ ವರ್ಷದಿಂದ ವರ್ಷಕ್ಕೆ ಉತ್ತುಂಗ ಪಥದಲ್ಲಿ ಸಾಗುತ್ತಿರುವುದಕ್ಕೆ ಸಾಕ್ಷಿಯೆಂಬಂತೆ ಕರ್ನಾಟಕದಲ್ಲಷ್ಟೇ ಅಲ್ಲದೆ ನೆರೆ ರಾಜ್ಯಗಳ ವಿದ್ಯಾರ್ಥಿನಿಯರು ಇಲ್ಲಿ ಪ್ರವೇಶ ಪಡೆದು ತಮ್ಮ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಪ್ರತಿಭೆಯನ್ನು ಮೆರೆಯುತ್ತಿರುವುದೇ ಇದಕ್ಕೆ ಸಾಕ್ಷಿ.

ಈ ವಿದ್ಯಾಲಯದ ಗುರಿ ಶೈಕ್ಷಣಿಕ ಪ್ರಗತಿಯಷ್ಟೇ ಅಲ್ಲ. ವಿದ್ಯಾರ್ಥಿನಿಯರಿಗೆ ಉತ್ತಮ ಭವಿಷ್ಯದ ವೇದಿಕೆಯನ್ನು ನಿರ್ಮಿಸುವುದು. ಉದ್ಯೋಗ ಮಾರ್ಗದರ್ಶನ ಮಾಹಿತಿ ಹಾಗೂ ನೇಮಕಾತಿ ಕೇಂದ್ರ ನಿರಂತರವಾಗಿ ಶ್ರಮಿಸಿ ಅವರಿಗೆ ವಿವಿಧ ಸಂಸ್ಥೆಗಳಲ್ಲಿ (ಕಂಪನಿ) ಉದ್ಯೋಗಗಳನ್ನು ದೊರಕಿಸಿಕೊಡುತ್ತಿದೆ. ರಾಷ್ಟ್ರೀಯ ಮತ್ತು ಅಂತಾ ರಾಷ್ಟ್ರೀಯ ಮಾನ್ಯತೆಯನ್ನು ಪಡೆದ ಸಂಸ್ಥೆಗಳು (ಕಂಪನಿ) ಕಾಲೇಜಿಗೆ ಆಗಮಿಸಿ ಸಂದರ್ಶನ ಹಾಗು ಲಿಖಿತ ಪರೀಕ್ಷೆಗಳ ಮೂಲಕ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉದ್ಯೋಗಗಳನ್ನು ನೀಡುತ್ತಿವೆ. ವ್ಯಾಸಂಗ ಮಾಡುತ್ತಿರುವಾಗಲೇ ಅವರ ಮುಂದಿನ ಭವಿಷ್ಯದ ಕನಸು ನನಸಾಗಲು ಶ್ರಮಿಸುತ್ತಿದೆ. ಸ್ವತಂತ್ರರಾಗಿ, ಬುದ್ಧಿವಂತರಾಗಿ, ಉತ್ತಮ ನಾಗರಿಕರಾಗಿ, ಆರ್ಥಿಕ ಸಬಲತೆಯನ್ನು ಪಡೆದು ಗೌರವಯುತವಾಗಿ ಬದುಕನ್ನು

students in all their academic endeavours, is the highlight of the college.

The college aims to inculcate a pluralistic, egalitarian, and cosmopolitan outlook among the students and provide various forums to tap the talent of its students. In recognition of the quality of education being disseminated by the institution, the **NAAC has Reaccredited the college, at A grade with a CGPA of 3.07** The college was rewarded with Autonomous status to evolve and execute progressive pedagogy, both at undergraduate and post graduate levels.

The college offers different combinations in four streams (B.A., B.Sc., B.Com., BBA& BCA) at undergraduate level. In its pursuit of excellence in education, the college attracts students from across the country.

The college not only aims at imparting education but also assists the students in shaping their future. The Placement cell is functioning effectively to enable the students to secure lucrative jobs. Many companies of national and international reputation, visit the campus regularly to select the prospective employees. Thus, the college plays a pro-active role in nurturing students to grow into independent, intelligent, cultured and respectable citizens of the society.

The management has started a Coaching Centre exclusively for competitive examinations like IAS & KAS in the Campus. Students who wish to pursue their careers in administration can enroll and get the required coaching at the centre. The Coaching Centre would also be used to provide coaching for Clerical and Probationary Examinations of Banking Sectors. The college has also started Coaching Centre for CA aspirant students of the college.

### About the Autonomous Status:

Though the college is an Autonomous institution since 2005, we bring to your notice that there is no difference between an Autonomous College and a Non Autonomous College when it comes to recognizing the Degree of the Students. Infact, the students of an Autonomous College enjoy better academic exposure because of the vibrancy in the syllabi. The records show that more number of students from our college join PG Centers in University of Mysore and elsewhere and have achieved better academic credentials, which is a feather in our cap. Upgradation of syllabi with successful implementation of NEP gives a pragmatic touch.

ರೂಪಿಸಿಕೊಳ್ಳಲು ಮುಕ್ತ ಅವಕಾಶಗಳನ್ನು ಈ ವಿದ್ಯಾಲಯ ಕಲ್ಪಿಸುತ್ತಿದೆ.

ಪ್ರಸಕ್ತ ಸಾಲಿನಲ್ಲಿ IAS, KAS ಮುಂತಾದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ಕೇಂದ್ರವನ್ನು ಪ್ರಾರಂಭಿಸಲಾಗಿದೆ. ಈ ತರಬೇತಿ ಕೇಂದ್ರದಿಂದ ಆಸಕ್ತ ವಿದ್ಯಾರ್ಥಿನಿಯರಿಗೆ ಬ್ಯಾಂಕಿಂಗ್, ವಿಮಾಕಂಪೆನಿ ಇತ್ಯಾದಿ ಸೇವೆಗಳಿಗೆ ಸೇರಲು ಅರ್ಹತಾ ಪರೀಕ್ಷೆ ತರಬೇತಿ ನೀಡಲಾಗುವುದು, ಹಾಗೂ CA ಓದಲು ಬಯಸುವ ವಿದ್ಯಾರ್ಥಿನಿಯರಿಗೂ ಕೂಡ ತರಬೇತಿ ಕೇಂದ್ರ ತೆರೆಯಲಾಗಿದೆ

**ಸ್ವಾಯತ್ತತೆ ಬಗ್ಗೆ:**

2005ರಲ್ಲಿ ಸ್ವಾಯತ್ತತೆ ಪಡೆದಿರುವ ನಮ್ಮ ಕಾಲೇಜು ದೇಶದ ಪ್ರತಿಷ್ಠಿತ ಕಾಲೇಜುಗಳಲ್ಲಿ ಒಂದಾಗಿದೆ. ಸ್ವಾಯತ್ತ ಮತ್ತು ಸ್ವಾಯತ್ತತೆ ಇಲ್ಲದ ಕಾಲೇಜುಗಳನ್ನು ತುಲನಾತ್ಮಕವಾಗಿ ನೋಡಿದಾಗ ಎರಡೂ ಪದವಿಗಳು ವಿಶ್ವವಿದ್ಯಾನಿಲಯದಿಂದ ಪ್ರಧಾನಿಸಲ್ಪಟ್ಟಿದ್ದು ಸ್ವಾಯತ್ತ ಕಾಲೇಜುಗಳಿಗೆ ಹೆಚ್ಚಿನ ಗೌರವವಿದೆ. ಏಕೆಂದರೆ ಸ್ವಾಯತ್ತ ಕಾಲೇಜುಗಳಲ್ಲಿ ಶೈಕ್ಷಣಿಕ ಗುಣಮಟ್ಟ, ವಾಸ್ತವ ಪ್ರಪಂಚಕ್ಕೆ ಪ್ರಸ್ತುತವಾಗಿರುತ್ತದೆ. ನಮ್ಮ ಕಾಲೇಜಿನ ಹೆಚ್ಚಿನ ಸಂಖ್ಯೆ ವಿದ್ಯಾರ್ಥಿನಿಯರು ಮೈಸೂರು ವಿಶ್ವವಿದ್ಯಾನಿಲಯ ಮತ್ತು ಇತರೆಡೆಗಳಲ್ಲಿ ಉನ್ನತ ವ್ಯಾಸಂಗಕ್ಕೆ ತೆರಳುತ್ತಿದ್ದಾರೆ. ಪಠ್ಯಕ್ರಮದ ಪ್ರಸ್ತುತತೆ ಮತ್ತು ಸಮಕಾಲೀನತೆ ನಮ್ಮ ವಿದ್ಯಾರ್ಥಿನಿಯರನ್ನು ಅಗ್ರ ಪಂಕ್ತಿಯಲ್ಲಿ ಇರುವಂತೆ ಮಾಡಿದೆ.

## ಕೇಂದ್ರಗಳು ಮತ್ತು ಕ್ಲಬ್‌ಗಳು

1. ಆಂತರಿಕ ಗುಣಮಟ್ಟ ಭರವಸೆ ಕೋಶ
2. ಉದ್ಯೋಗ ಮತ್ತು ಮಾರ್ಗದರ್ಶನ ಕೇಂದ್ರ
3. ಸಿಇಟಿ ಸೆಲ್
4. ಎನ್‌ಎಸ್‌ಎಸ್ & ಎನ್‌ಸಿಸಿ
5. ರೇಂಜರ್ಸ್ ಮತ್ತು ರೋವರ್ಸ್
6. ಆರೋಗ್ಯ ಮತ್ತು ಸ್ವಾಸ್ಥ್ಯ ಕೇಂದ್ರ
7. ಕುಂದುಕೊರತೆ ಪರಿಹಾರ ಕೇಂದ್ರ
8. ಲೈಂಗಿಕ ದೌರ್ಜನ್ಯ ನಿಗ್ರಹ ಕೇಂದ್ರ
9. ಆಂತರಿಕ ದೂರುಗಳ ಕೇಂದ್ರ
10. ರ್‍ಯಾಗಿಂಗ್ ಪ್ರತಿರೋಧ ಕೇಂದ್ರ
11. ಸಮಾಲೋಚನಾ ಕೇಂದ್ರ
12. ನಿಧಾನ ಕಲಿಯುವವರಿಗೆ ಪರಿಹಾರ ತರಬೇತಿ ಕೇಂದ್ರ
13. ತರಗತಿ ಸಮಾಲೋಚನೆ
14. ಪೋಷಕರ ಸಂಘ
15. ಸಂಶೋಧನಾ ಕೇಂದ್ರ
16. ಹಿರಿಯ ವಿದ್ಯಾರ್ಥಿಗಳ ಸಂಘ
17. ಶೈಕ್ಷಣಿಕ ಕ್ಲಬ್ಸ್
18. ಮಹಿಳಾ ಅಧ್ಯಯನ ಕೇಂದ್ರ
19. ಮಲ್ಟಿ ಜಿಮ್
20. ಯೂತ್ ರೆಡ್ ಕ್ರಾಸ್

## Cells & Clubs

1. Internal Quality Assurance Cell (IQAC)
2. Placement & Career Guidance Cell
3. CET Cell
4. NSS & NCC
5. Rangers & Rovers
6. Health & Wellness Centre
7. Grievance Redressal Cell
8. POSH Cell (Prevention of Sexual Harassment )
9. Internal Complaints Cell
10. Anti-ragging Squad
11. Counseling Cell
12. Remedial Coaching Centre for slow learners
13. Class Room Counseling
14. Parents' Association
15. Research Centre
16. Alumni Association
17. Academic Clubs
18. Centre for Women Studies
19. Multi-Gym
20. Youth Red Cross



## ಪ್ರಾಚಾರ್ಯರ ನುಡಿ

ಎಲ್ಲರಿಗೂ ಶುಭಾಶಯಗಳು

ನಮ್ಮ ಕಾಲೇಜಿನ ಪರಿಚಯ ಪುಸ್ತಿಕೆಯನ್ನು ತಮ್ಮ ಹಸ್ತದಲ್ಲಿರಿಸಲು ಹರ್ಷಿಸುತ್ತೇನೆ. ಮೈಸೂರಿನ ಉನ್ನತ ವ್ಯಾಸಂಗದ ಮುಂಚೂಣಿ ಸಂಸ್ಥೆಗಳಲ್ಲಿ ಒಂದಾದ ನಮ್ಮ ಸ್ವಾಯತ್ತ ಕಾಲೇಜು ಮೈಸೂರು ವಿಶ್ವವಿದ್ಯಾನಿಲಯದ ಸಂಯೋಜನೆಗೆ ಒಳಪಟ್ಟಿದೆ. ಪ್ರಸ್ತುತ ನಮ್ಮ ಕಾಲೇಜಿನಲ್ಲಿ 5 ಪದವಿ ಕಾರ್ಯಕ್ರಮಗಳು – ಬಿ.ಎ, ಬಿ.ಎಸ್ಸಿ, ಬಿ.ಸಿ.ಎ, ಬಿ.ಕಾಂ ಮತ್ತು ಬಿ.ಬಿ.ಎ ಹಾಗೂ 3 ಸ್ನಾತಕೋತ್ತರ ಕಾರ್ಯಕ್ರಮಗಳು ಎಂ.ಎ. (ಅರ್ಥಶಾಸ್ತ್ರ), ಎಂ.ಕಾಂ. ಮತ್ತು ಎಂ.ಎಸ್ಸಿ. (ರಸಾಯನಶಾಸ್ತ್ರ) ಇವುಗಳ ಬೋಧನೆ ಹಾಗೂ ಮೌಲ್ಯಮಾಪನ ನಡೆಸಲಾಗುತ್ತಿದೆ. ಜೊತೆಗೆ 140ಕ್ಕೂ ಹೆಚ್ಚು ಉದ್ಯೋಗಾಧಾರಿತ ಕಾರ್ಯಕ್ರಮಗಳನ್ನು ಕಾಲೇಜಿನ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿದೆ. ಸ್ಪೋಕನ್ ಇಂಗ್ಲಿಷ್‌ನಲ್ಲಿ ಅಲ್ಪಾವಧಿ ಕೋರ್ಸ್, 'ಭಾರತೀಯ ಸಂಸ್ಕೃತಿ' ವಿಷಯದ ಕಡ್ಡಾಯ ಅಧ್ಯಯನ ಕೂಡ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿದೆ. ನ್ಯಾಕ್ ನಿಂದ "ಎ" ಶ್ರೇಣಿ (ಸಿಜಿಪಿಎ 3.07) ಹೊಂದಿರುವ ಮೈಸೂರು ವಿಶ್ವವಿದ್ಯಾನಿಲಯ ವ್ಯಾಪ್ತಿಯ ಕಾಲೇಜು ನಮ್ಮದಾಗಿದೆ.

ನಗರದ ಸರಸ್ವತಿಪುರಂ ಬಡಾವಣೆಯ ಸುಂದರ ವಾತಾವರಣದಲ್ಲಿರುವ ಮೂರು ಅಂತಸ್ತಿನ ಕಾಲೇಜು ಶೈಕ್ಷಣಿಕ ಅತ್ಯುತ್ತಮ ಹಿನ್ನೆಲೆ ಹೊಂದಿದೆ. ಇಲ್ಲಿ 40 ತರಗತಿ ಕೊಠಡಿಗಳು 22 ಪ್ರಯೋಗಾಲಯಗಳು, ವಿಶಾಲವಾದ ಗ್ರಂಥಾಲಯ, ಮಲ್ಟಿಜಿಮ್, ಸಂಶೋಧನಾ ಕೇಂದ್ರ, ಸುಸಜ್ಜಿತ ಸಭಾಂಗಣಗಳು ಕಾಲೇಜಿಗೆ ಮೆರಗು ನೀಡುತ್ತಿವೆ. ಕ್ರೀಡಾ ವಿಭಾಗವು ಸದೃಢವಾಗಿದ್ದು ಥ್ರೋಬಾಲ್, ಕಬಡ್ಡಿ, ಖೋ–ಖೋ, ಬ್ಯಾಡ್ಮಿಂಟನ್, ಹ್ಯಾಂಡ್ ಬಾಲ್, ಬ್ಯಾಸ್ಕೆಟ್ ಬಾಲ್

## From the Principal's Desk....

Greetings to all

It is my pleasure to place the prospectus of our college in your hands. This is one among the premier institutes of higher learning in Mysuru. Being an autonomous college, affiliated to University of Mysore, the college is offering 5 UG programmes BA, BSc, BCA, B.Com & BBA and 3 PG programmes MA (Economics) M.Com & M.Sc (Chemistry). There are 140 Career Oriented Programmes which are specifically offered to the students of our college in the form of add on courses. Short term course in Spoken English & compulsory study of Bharathiya Samskruthi are also offered to the students. Our College is one of the colleges under the University of Mysore, accredited with 'A' Grade (CGPA 3.07) by NAAC.

Imposing 3 storey building of the college in the serene campus, provides better academic and physical ambience. 40 class rooms 22 laboratories, large library with well stacked collections. Multi gym, research centers and State-of-the-Art Auditorium are other hallmarks of the college. Besides these, the college has sufficient sports facilities for Throwball, Kabaddi, Kho-kho, Badminton, Handball, Basketball and Softball.

ಹಾಗೂ ಸಾಫ್ಟ್ ಬಾಲ್ ಅಂಕಣಗಳನ್ನು ಇಲ್ಲಿ ಅಭಿವೃದ್ಧಿ ಪಡಿಸಲಾಗಿದೆ. ಹಾಕಿ, ಫುಟ್‌ಬಾಲ್ ಹಾಗೂ ಈಜುಕೊಳದ ಅವಶ್ಯಕತೆಗಳನ್ನು ಸನಿಹದಲ್ಲಿರುವ ಮೈಸೂರು ವಿಶ್ವವಿದ್ಯಾನಿಲಯದ ಸಹಯೋಗದೊಂದಿಗೆ ಪಡೆದುಕೊಳ್ಳಲಾಗಿದೆ. ಪ್ರತಿ ವರ್ಷ ನಮ್ಮ ವಿದ್ಯಾರ್ಥಿನಿಯರು ವಿಶ್ವವಿದ್ಯಾನಿಲಯ ಹಾಗೂ ರಾಜ್ಯಮಟ್ಟದಲ್ಲಿ ಶ್ರೇಷ್ಠ ಸಾಧನೆಗೈದು ಕಾಲೇಜಿಗೆ ಕೀರ್ತಿ ತರುತ್ತಿದ್ದಾರೆ.

'ಉತ್ಕೃಷ್ಟ ಶಿಕ್ಷಣದಿಂದ ಮಹಿಳಾ ಸಬಲೀಕರಣ' ಎಂಬ ಧ್ಯೆಯ ವಾಕ್ಯ ಕಾಲೇಜಿನದಾಗಿದ್ದು, ಈ ಧ್ಯೆಯದ ಸಾಧನೆಗೆ ಕಟಿಬದ್ಧರಾಗಿ ಸೇವೆಗೈಯುತ್ತಿರುವ ಸಿಬ್ಬಂದಿ ಉತ್ತಮ ಗುಣಮಟ್ಟದ ಶಿಕ್ಷಣ, ಮೌಲ್ಯಮಾಪನ ಹಾಗೂ ಇತರೆ ಸೇವೆಗಳನ್ನು ಸಮರ್ಪಕವಾಗಿ ಸಲ್ಲಿಸುತ್ತಿದ್ದಾರೆ. ಕಾಲೇಜಿನ ಪರೀಕ್ಷಾ ಫಲಿತಾಂಶ ಶೇ.95ಕ್ಕಿಂತ ಹೆಚ್ಚಾಗಿರುತ್ತದೆ. ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗಾಗಿ ವಿದ್ಯಾರ್ಥಿ ವೇದಿಕೆಗಳು, ವಿವಿಧ ಕ್ಲಬ್‌ಗಳು, ಎನ್.ಎಸ್.ಎಸ್, ಎನ್.ಸಿ.ಸಿ, ರೆಡ್ ಕ್ರಾಸ್ ಘಟಕಗಳು, ಹಿರಿಯ ವಿದ್ಯಾರ್ಥಿ ಸ0ಘ, ಪೋಷ ಕ – ಶಿಕ್ಷಕರ ಉದ್ಯಮಶೀಲಕೋಶ, ಕೌಶಲ್ಯಾಭಿವೃದ್ಧಿಕೋಶ ಇಲ್ಲಿ ಪರಿಣಾಮಕಾರಿ ಯಾಗಿ ಕೆಲಸ ನಿರ್ವಹಿಸುತ್ತಿವೆ. ಉದ್ಯೋಗ ಮಾರ್ಗದರ್ಶನ ಕೇಂದ್ರವು ವಿದ್ಯಾರ್ಥಿಗಳಲ್ಲಿ ಜೀವನ ಕೌಶಲ್ಯ ಹೆಚ್ಚಿಸುವ ಜೊತೆಗೆ ಕ್ಯಾಂಪಸ್‌ನಲ್ಲಿ ಆಯ್ಕೆ ಪ್ರಕ್ರಿಯೆ ನಡೆಸಿಕೊಡುತ್ತಿದೆ. ಪ್ರತೀ ವರ್ಷ ಕಾಲೇಜಿನಿಂದ ನಿರ್ಗಮಿತ ವಿದ್ಯಾರ್ಥಿಗಳಲ್ಲಿ ಶೇ.40ರಷ್ಟು ಕ್ಯಾಂಪಸ್ ಆಯ್ಕೆ ಪ್ರಕ್ರಿಯೆಯಲ್ಲಿ ಉದ್ಯೋಗ ಪಡೆಯುತ್ತಿದ್ದಾರೆ.

ನಿಧಾನಗತಿಯಲ್ಲಿ ಕಲಿಯುವವರಿಗೆ ಪರ್ಯಾಯ ತರಗತಿಗಳು ಹಾಗೂ ಸಮಾಲೋಚನೆ, ಪ್ರತಿಭಾನ್ವಿತ ವಿದ್ಯಾರ್ಥಿನಿಯರಿಗೆ ಸವಾಲೆಸಗುವ ನಿಯೋಜಿತ ಪಾಠಗಳು ಹಾಗೂ ಪ್ರಾಜೆಕ್ಟ್‌ಗಳು, ಮಧ್ಯಮ ಅವಸ್ಥೆ ವಿದ್ಯಾರ್ಥಿನಿಯರಿಗೆ ಮಾರ್ಗದರ್ಶನ ಹಾಗೂ ಸಮಾನ ಶಿಕ್ಷಣ ಬೋಧನೆಗಳನ್ನು ಯೋಜಿಸಿ, ಸಾರ್ಥಕವಾಗಿ ನಡೆಸಲಾಗುತ್ತಿದೆ. ಉದ್ಯೋಗ ಆಧಾರಿತ ಕಾರ್ಯಕ್ರಮಗಳ ಕಡ್ಡಾಯ ವ್ಯಾಸಂಗ ವಿದ್ಯಾರ್ಥಿನಿಯರಲ್ಲಿ ಉದ್ಯೋಗ ಕೌಶಲ್ಯದ ಜೊತೆಗೆ ಆತ್ಮ ವಿಶ್ವಾಸ ಹೆಚ್ಚಿಸುತ್ತಿದೆ. 2024–25ನೇ ಸಾಲಿನಿಂದ ಪರಿಷ್ಕೃತ ಓಇಕ (ರಾಷ್ಟ್ರೀಯ ಶಿಕ್ಷಣ ನೀತಿ) ಮಾದರಿಯಲ್ಲಿ ಪಠ್ಯಕ್ರಮಗಳನ್ನು ಅಳವಡಿಸಲಾಗಿದೆ.

ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೋಶವು, ಕೆಎಎಸ್/ ಐಎಎಸ್/ ಬ್ಯಾಂಕಿಂಗ್ ಮತ್ತು ಇತರೆ ಪರೀಕ್ಷಾ ಆಕಾಂಕ್ಷಿಗಳಿಗೆ ತರಬೇತಿ ನೀಡುವಲ್ಲಿ ಶ್ರಮವಹಿಸುತ್ತಿದೆ. ಸಿಎ ಪರೀಕ್ಷೆ ತಯಾರಿ ನಡೆಸುತ್ತಿರುವ ವಿದ್ಯಾರ್ಥಿನಿಯರಿಗೆ ಕೂಡ ತರಬೇತಿಯನ್ನು ನೀಡಲಾಗುತ್ತಿದೆ.

ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿಯವರ ಅಧ್ಯಕ್ಷತೆಯ ಗೌರ್ನಿಂಗ್ ಬಾಡಿ, ಶೈಕ್ಷಣಿಕ ಮಂಡಳಿ, ಅಧ್ಯಯನ ಮಂಡಳಿಗಳು ಹಾಗೂ ಹಣಕಾಸು ಸಮಿತಿಗಳು–ಇಲ್ಲಿ ಶಾಸನಬದ್ಧ ಸಮಿತಿಗಳಾಗಿದ್ದು ಆ ಮುಖೇನ ಕಾಲೇಜಿನ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಸಂಘಟಿಸಲಾಗುತ್ತಿದೆ. ಜೊತೆಗೆ ವಿವಿಧ ಸಮಿತಿ ಉಪಸಮಿತಿಗಳು ಪ್ರಾಚಾರ್ಯರಿಗೆ ದೈನಂದಿನ ಕಾವ್ಯಗಳಲ್ಲಿ ಸಹಾಯ ನೀಡುತ್ತಿವೆ.

ನಮ್ಮ ಕಾಲೇಜನ್ನು ಆಯ್ಕೆ ಮಾಡಿಕೊಂಡಿರುವ ನಿಮಗೆ ಅಭಿನಂದನೆ ಸಲ್ಲಿಸುತ್ತಾ, ನಿಮಗೆಲ್ಲರಿಗೂ ಕಾಲೇಜಿನ ದಿನಗಳು ಆಹ್ಲಾದಕರವಾಗಿರಲಿ ಎಂದು ಶುಭ ಕೋರುತ್ತೇನೆ.

University swimming pool, hockey ground and oval grounds of University of Mysore are depended upon for field and track events. Our students bring laurels to the college through remarkable achievements at university and state level sports every year.

Empowering women through academic excellence is the vision of the college. To accomplish the vision, dedicated staff of the college are providing high quality teaching evaluation and other support services. The college has above 95% results in Examinations. To ensure all round development of students, facilities such as students forums, various clubs, units of NSS, NCC and Youth Red Cross, interactive platforms Alumni Association, Parent Teachers Association, Entrepreneurship cell and Skill development cell are working effectively. The Placement and Career Guidance Cell is striving hard to impart life skills and providing platform for campus selection process. About 40% of outgoing students of the college are getting job placement orders every year.

Remedial coaching and counseling for slow learners, challenging assignments and project works for advanced learners and peer teaching and mentoring for mediocre is efficiently carried out. Women Entrepreneurship and Career Oriented Programmes boost the confidence level of students besides enhancing their employability.

Revised NEP (CBCS & CGPA) for all Degree programmes is introduced from the acedemic year 2024-25.

Competitive Examination Training cell provides intensive training to those who aspire to appear for IAS/ KAS/ Banking and other Examinations. There is a provision for CA aspirants to get coaching in the college.

The Governing Body headed by His Holiness Jagadguru Sri Shivarathri Deshikendra Mahaswamiji, Academic Council, Boards of Studies and Finance Committee are the Statutory Bodies ensuring smooth functioning of the college. There are several committees and sub committees to assist the Principal in the day-to-day administration of the college.

I congratulate you all, the prospective primary stakeholders, for having chosen our college. I wish you all a happy and comfortable stay in the campus.

राष्ट्रीय मूल्यांकन एवं प्रत्यायन परिषद

विश्वविद्यालय अनुदान आयोग का स्वायत्त संस्थान

**NATIONAL ASSESSMENT AND ACCREDITATION COUNCIL**

*An Autonomous Institution of the University Grants Commission*

# Certificate of Accreditation

The Executive Committee of the
National Assessment and Accreditation Council
is pleased to declare

J. S. S. College for Women (Autonomous)

Saraswathipuram, Mysuru, affiliated to University of Mysore,
Karnataka as

Accredited

with CGPA of 3.07 on four point scale
at A grade
valid up to July 18, 2027

Date : July 19, 2022

Director

EC(SC)/115/4th Cycle/KACOGN10288

# NATURE SCIENCE FOUNDATION

(A Unique Research and Development Centre for Society Improvement
*An ISO/IEC 17020:2012 Accredited Type 'A' Inspection Body by NABCB, QCI,*
**Coimbatore - 641 004, Tamil Nadu, India.**

Regd. No. 114 / 2017

Nature Science Foundation

## Certificate of Merit

**NSF/BCA/2025/35**



## BEST COLLEGE AWARD

*This is to certify that **JSS College for Women (Autonomous), Saraswathipuram, Mysuru, Karnataka, India** has been awarded the **Best College Award** for the academic year 2025-2026 by the Nature Science Foundation, Coimbatore, Tamil Nadu, India. The award recognizes the college's exemplary efforts in providing state-of-the-art facilities that support academic excellence, contribution to Community Development, foster leadership development, and promote environmental consciousness among its students.*

*Chief Executive officer*
*Nature Science Foundation*

*Director*
*Nature Science Foundation*

# Environment Solutions

*[ISO QMS (9001:2015) & EMS (14001:2015) Certified and Ministry of MSME Registered Organization]*
No.5, P.V. Rajamannar Salai, Vijayaragavapuram West,
Chennai– 600 093, Tamil Nadu, India.
Email: environsoln@gmail.com, Mobile: 9042972540

Ministry of MSME, Govt. of India

## "Best Green & Clean Campus Award"

**This is to certify that JSS College for Women (Autonomous), Saraswathipuram, Mysuru – 570 009, Karnataka, India been honoured with "Best Green & Clean Campus Award" for maintaining the eco-friendly campus as per the "National Building Code and Central / State Pollution Control Board" guidelines. To ensure that the environmental management system, maintenance of ecofriendly campus which lead environment clean and neat, green initiatives, social responsibility, institutional values, youth leadership quality, waste management practices, landscape management design and carbon footprint observations implemented effectively for the benefit of the stakeholders by the organization.**

**Date of Validity: 11.12.2027**

Dr. M.R. Chandra Mohan
CHIEF EXECUTIVE OFFICER

Dr. B. Mythili Gnanamangai
CERTIFIED AUDITOR IGBC & ASSOCHAM

Er. D. Dinesh Kumar
BEE CERTIFIED ENERGYAUDITOR

## ಪದವಿ ವಿಭಾಗಗಳು ಮತ್ತು ಸಂಯೋಜನೆ

| ಕ್ರ.ಸಂ | ತರಗತಿಗಳು | ಐಚ್ಛಿಕ ವಿಷಯಗಳು | ಮಾಧ್ಯಮ |
|---|---|---|---|
| 1 | ಬಿ.ಎ | ಇತಿಹಾಸ / ಅರ್ಥಶಾಸ್ತ್ರ / ಭೂಗೋಳಶಾಸ್ತ್ರ (ಎಚ್‌ಇಜಿ)<br>ಇತಿಹಾಸ / ಅರ್ಥಶಾಸ್ತ್ರ / ಕನ್ನಡ (ಎಚ್‌ಇಕೆ)<br>ಇತಿಹಾಸ / ಅರ್ಥಶಾಸ್ತ್ರ / ರಾಜ್ಯಶಾಸ್ತ್ರ (ಎಚ್‌ಇಪಿ)<br>ಕನ್ನಡ / ಅರ್ಥಶಾಸ್ತ್ರ / ಭೂಗೋಳಶಾಸ್ತ್ರ (ಕೆಇಜಿ) | ಕನ್ನಡ |
| 2 | ಬಿ.ಎ. | ಇತಿಹಾಸ / ಅರ್ಥಶಾಸ್ತ್ರ / / ಇಂಗ್ಲಿಷ್ (ಎಚ್‌ಇಇ)<br>ಸಾರ್ವಜನಿಕ ಆಡಳಿತ / ಪತ್ರಿಕೋದ್ಯಮ / ಇಂಗ್ಲಿಷ್ (ಪಿಜೆಇ) | ಇಂಗ್ಲಿಷ್ |
| 3 | ಬಿ.ಎಸ್ಸಿ | ಭೌತಶಾಸ್ತ್ರ / ರಸಾಯನಶಾಸ್ತ್ರ / ಗಣಿತಶಾಸ್ತ್ರ (ಪಿಸಿಎಂ)<br>ಭೌತಶಾಸ್ತ್ರ / ಗಣಿತಶಾಸ್ತ್ರ / ಗಣಕವಿಜ್ಞಾನ (ಪಿಎಂಸಿಎಸ್)<br>ಸಸ್ಯಶಾಸ್ತ್ರ / ಜೀವರಸಾಯನಶಾಸ್ತ್ರ / ಸೂಕ್ಷ್ಮಜೀವಶಾಸ್ತ್ರ (ಬಿಬಿಎಂ)<br>ಜೀವರಸಾಯನಶಾಸ್ತ್ರ / ಸೂಕ್ಷ್ಮಜೀವಶಾಸ್ತ್ರ / ಜೀವತಂತ್ರಜ್ಞಾನ (ಬಿಎಂಬಿಟಿ)<br>ಸಸ್ಯಶಾಸ್ತ್ರ / ರಸಾಯನಶಾಸ್ತ್ರ / ಜೀವತಂತ್ರಜ್ಞಾನ (ಬಿಸಿಬಿಟಿ)<br>ರಸಾಯನಶಾಸ್ತ್ರ / ಸಸ್ಯಶಾಸ್ತ್ರ / ಪ್ರಾಣಿಶಾಸ್ತ್ರ /(ಸಿಬಿಜೆಡ್) | ಇಂಗ್ಲಿಷ್ |
| 4 | ಬಿ.ಕಾಂ. | ಮೈಸೂರು ವಿಶ್ವವಿದ್ಯಾನಿಲಯದ ನಿಯಮಗಳಿಗನುಸಾರವಾಗಿ | ಇಂಗ್ಲಿಷ್ |
| 5 | ಬಿಬಿಎ | ಅಖಿಲ ಭಾರತೀಯ ತಾಂತ್ರಿಕ ಶಿಕ್ಷಣ ಪರಿಷತ್ತು (AICTE) ಸೇರ್ಪಡೆ | ಇಂಗ್ಲಿಷ್ |
| 6 | ಬಿಸಿಎ | ಅಖಿಲ ಭಾರತೀಯ ತಾಂತ್ರಿಕ ಶಿಕ್ಷಣ ಪರಿಷತ್ತು(AICTE) ಸೇರ್ಪಡೆ | ಇಂಗ್ಲಿಷ್ |

**ಭಾಷಾ ವಿಷಯಗಳು :** ಕನ್ನಡ ಭಾಷೆಯ ಜೊತೆಗೆ, ಇಂಗ್ಲಿಷ್, ಹಿಂದಿ, ಸಂಸ್ಕೃತ, * ಫ್ರೆಂಚ್, * ಅರೇಬಿಕ್, * ತೆಲುಗು, * ಮಲೆಯಾಳಂ ಇವುಗಳಲ್ಲಿ ಯಾವುದಾದರು ಒಂದು ಭಾಷೆಯನ್ನು ಕಡ್ಡಾಯವಾಗಿ ವ್ಯಾಸಂಗ ಮಾಡಬೇಕು.

**ಸೂಚನೆ :** * ಸ್ವಯಂ ಅಧ್ಯಯನ.

| PG Programmes (Under CBCS & CAGP) | | | |
|---|---|---|---|
| 1. | ಎಂ.ಎ. ಅರ್ಥಶಾಸ್ತ್ರ | ಮೈಸೂರು ವಿಶ್ವವಿದ್ಯಾನಿಲಯ ಹಾಗೂ ಸ್ವಾಯತ್ತ ನಿಯಮಾನುಸಾರ | ಇಂಗ್ಲಿಷ್ |
| 2. | ಎಂ.ಕಾಂ. | ಮೈಸೂರು ವಿಶ್ವವಿದ್ಯಾನಿಲಯ ಹಾಗೂ ಸ್ವಾಯತ್ತ ನಿಯಮಾನುಸಾರ | ಇಂಗ್ಲಿಷ್ |
| 3. | ಎಂ.ಎಸ್ಸಿ ರಸಾಯನಶಾಸ್ತ್ರ | ಮೈಸೂರು ವಿಶ್ವವಿದ್ಯಾನಿಲಯ ಹಾಗೂ ಸ್ವಾಯತ್ತ ನಿಯಮಾನುಸಾರ | ಇಂಗ್ಲಿಷ್ |

### ಮೌಲ್ಯವರ್ಧಕ ಕಾರ್ಯಕ್ರಮಗಳು (ಸ್ನಾತಕೋತ್ತರ)

1. ಪಿಜಿ ಡಿಪ್ಲೊಮಾ ಇನ್ ಬ್ಯಾಂಕಿಂಗ್ & ಇನ್ಶೂರೆನ್ಸ್ ಮ್ಯಾನೇಜ್ಮೆಂಟ್
2. ಪಿಜಿ ಡಿಪ್ಲೊಮಾ ಇನ್ ಟ್ಯಾಕ್ಸ್ ಮ್ಯಾನೇಜ್‌ಮೆಂಟ್
3. ಪಿಜಿ ಡಿಪ್ಲೊಮಾ ಇನ್ ಆಂತ್ರೆಪ್ರೂನರ್‌ಶಿಪ್ ಡೆವಲಪ್‌ಮೆಂಟ್
4. ಪಿಜಿ ಡಿಪ್ಲೊಮಾ ಇನ್ IND AS & IFRS
5. ಪಿಜಿ ಡಿಪ್ಲೊಮಾ ಇನ್ ಲಿಂಗ ಮತ್ತು ಅಭಿವೃದ್ಧಿಯಲ್ಲಿ ಸ್ನಾತಕೋತ್ತರ ಪದವಿ
6. ಪಿಜಿ ಡಿಪ್ಲೊಮಾ ಇನ್ ಸ್ಪೆಕ್ಟ್ರೋಸ್ಕೋಪಿಕ್ ಅಧ್ಯಯನದಲ್ಲಿ ಸ್ನಾತಕೋತ್ತರ ಪದವಿ
7. ಪಿಜಿ ಡಿಪ್ಲೊಮಾ ಇನ್ ಔಷಧೀಯ ವಿಶ್ಲೇಷಣೆ ಮತ್ತು ಉಪಕರಣಗಳಲ್ಲಿ ಸ್ನಾತಕೋತ್ತರ ಪದವಿ
8. ಪಿಜಿ ಡಿಪ್ಲೊಮಾ ಇನ್ ಔಷಧೀಯ ರಸಾಯನಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ
9. ಪಿಜಿ ಡಿಪ್ಲೊಮಾ ಇನ್ ತುಲನಾತ್ಮಕ ಅಭಿವೃದ್ಧಿ ಮತ್ತು ಜಾಗತಿಕ ವ್ಯವಹಾರದಲ್ಲಿ ಸ್ನಾತಕೋತ್ತರ ಪದವಿ
10. ಪಿಜಿ ಡಿಪ್ಲೊಮಾ ಇನ್ ಜೈವಿಕ ರಸಾಯನಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ

## UG PROGRAMMES & COMBINATIONS OFFERED

| Sl. No. | Courses | Combinations | Medium |
|---|---|---|---|
| 1 | B.A. | History, Economics, Geography (HEG)<br>History, Economics, Kannada (HEK)<br>History, Economics, Political Science (HEP)<br>Kannada, Economics, Geography (KEG) | Kannada |
| 2. | B.A. | History, Economics, English (HEE)<br>Public Administration, Journalism, English (PJE) | English |
| 3. | B.Sc. | Physics, Chemistry, Mathematics (PCM)<br>Physics, Mathematics, Computer Science (PMCs)<br>Botany, Biochemistry, Microbiology (BBM)<br>Biochemistry, Microbiology, Biotechnology (BMBT)<br>Botany, Chemistry, Biotechnology (BCBT)<br>Chemistry, Botany, Zoology (CBZ) | English |
| 4. | B.Com | As per University of Mysore regulations | English |
| 5. | BBA | Under All India Council for Technical Education (AICTE) | English |
| 6. | BCA | Under All India Council for Technical Education (AICTE) | English |

**Languages :** Along with Kannada language student has to learn either English / Hindi / Sanskrit / *French / *Arabic/ *Telugu/ *Malayalam

**Note :** *Self-Study

| PG Programmes (Under CBCS & CAGP) | | | |
|---|---|---|---|
| 1. | MA in Economics | As per University of Mysore and Autonomous Regulations | English |
| 2. | M.Com | As per University of Mysore and Autonomous Regulations | English |
| 3. | MSc in Chemistry | As per University of Mysore and Autonomous Regulations | English |

### ADD ON COURSES FOR PG (COP)

1. PG Dip in Banking & Insurance Management
2. PG Dip. in Tax Management
3. PG Dip. in Entrepreneurship Development
4. PD Dip. in IND AS & IFRS
5. PG Dip in Gender & Development
6. PG Dip in Spectroscopic studies.
7. PG Dip in Pharmaceutical Analysis and Instrumentation
8. PG Dip in Medicinal Chemistry
9. PG Dip in Comparative Development & Global Business
10. PG Dip in Biological Chemistry

## ADD ON COURSES FOR UG (COP)

### ವೃತ್ತಿ ಮಾರ್ಗದರ್ಶಕ ಕಾರ್ಯಕ್ರಮಗಳು

**ಪದವಿ ವ್ಯಾಸಂಗ ಮಾಡುತ್ತಿರುವಾಗ ವಿದ್ಯಾರ್ಥಿನಿಯರು ಹೆಚ್ಚುವರಿ ಕೋರ್ಸುಗಳನ್ನು ಅಭ್ಯಸಿಸಿ ವ್ಯಕ್ತಿಗತ ಕೌಶಲ್ಯ ವೃದ್ಧಿಸಿಕೊಂಡು ಉದ್ಯೋಗಾವಕಾಶವನ್ನು ಹೆಚ್ಚಿಸಿಕೊಳ್ಳಬಹುದು. ವೃತ್ತಿ ಮಾರ್ಗದರ್ಶಕ ಕೋರ್ಸುಗಳ ವಿವರ**

**ಬಿ.ಕಾಂ., ಬಿಬಿಎ**

1. ಮಾನವ ಸಂಪನ್ಮೂಲ ನಿರ್ವಹಣೆ 2. ವಿದೇಶಿ ವ್ಯಾಪಾರ 3. ವಿಮಾ ನಿರ್ವಹಣೆ 4. ರಿಟೇಲ್ ಮ್ಯಾನೆಜ್‌ಮೆಂಟ್ 5. ಮಾರ್ಕೆಟಿಂಗ್ ನಿರ್ವಹಣೆ 6. ಉದ್ಯಮಶೀಲತೆ ಅಭಿವೃದ್ಧಿ 7. ವೃತ್ತಿಪರ ಸಂವಹನ ಮತ್ತು ಮೃದು ಕೌಶಲ್ಯಗಳು 8. ಹಣಕಾಸು ನಿರ್ವಹಣೆ 9. ತೆರಿಗೆ ನಿರ್ವಹಣೆ 10. ಡಿಜಿಟಲ್ ಮಾರ್ಕೆಟಿಂಗ್ 11. ಲೆಕ್ಕಪರಿಶೋಧನೆ

**ಬಿ.ಎಸ್‌ಸಿ**

1. ತೋಟಗಾರಿಕೆ 2. ಕ್ಲಿನಿಕಲ್ ಲ್ಯಾಬೋರೇಟರಿ ತಂತ್ರಗಾರಿಕೆಗಳು 3. ಜೈವಿಕ ಉಪಕರಣಗಳು 4. ಆಹಾರ ಮತ್ತು ಪೌಷ್ಟಿಕಾಂಶ ವಿಜ್ಞಾನ 5. ವೈದ್ಯಕೀಯ ಜೀವರಸಾಯನಶಾಸ್ತ್ರ 6. ಸಸ್ಯ ಅಂಗಾಂಶ ಕೃಷಿ 7. ಆಹಾರ ಸಂಸ್ಕರಣಾ ತಂತ್ರಜ್ಞಾನಗಳು 8. ಕೃಷಿ ಮತ್ತು ಮೀನುಗಾರಿಕೆ ನಿರ್ವಹಣೆ 9. ಮಹಿಳಾ ಆರೋಗ್ಯ ಮತ್ತು ನೈರ್ಮಲ್ಯ 10. ಮೂಲ ಎಲೆಕ್ಟ್ರಾನಿಕ್ಸ್ 11. ಮೂಲ ಗಣಿತ,

**ಬಿ.ಎ**

1. ಸಂವಹನ ಇಂಗ್ಲಿಷ್ 2. ಕೃಷಿ ಮಾರುಕಟ್ಟೆ ನಿರ್ವಹಣೆ 3. ಛಾಯಾಚಿತ್ರ ಪತ್ರಿಕೋದ್ಯಮ 4. ಶರಣ ಸಾಹಿತ್ಯ 5. ಕ್ರಿಯಾತ್ಮಕ ಹಿಂದಿ 6. ಸಂಪ್ರದಾಯ ಕಲಾ 7. ಯೋಗ ವಿಜ್ಞಾನ 8. ನೃತ್ಯ 9. ವ್ಯವಹಾರ ಪತ್ರಿಕೋದ್ಯಮ ಮತ್ತು ಸಹಕಾರ 10. ಅಭಿವೃದ್ಧಿಗಾಗಿ ಸಂವಹನ 11. ಪರಂಪರೆ ಪ್ರವಾಸೋದ್ಯಮ 12 ಸಂಭಾಷಿಸುವ ಸಂಸ್ಕೃತ 13. ಭಾರತೀಯ ಆರ್ಥಿಕತೆಯಲ್ಲಿ ಪ್ರಸ್ತುತ ಸಮಸ್ಯೆಗಳು 14. ಸಮಾಜ ಕಲ್ಯಾಣ 15. ಮಹಿಳಾ ಅಧ್ಯಯನ 16. ವಿಪತ್ತು ನಿರ್ವಹಣೆ 17. ಮಾನವ ಹಕ್ಕುಗಳು 18. ಸಂಗೀತ

**ಬಿಸಿಎ**

1. ಗ್ರಾಫಿಕ್ ಡಿಸೈನ್ 2. ಆಂಡ್ರಾಯ್ಡ್ ಪ್ರೊಗ್ರಾಮಿಂಗ್ 3. ಸಾಫ್ಟ್‌ವೇರ್ ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ 4. ಅನಿಮೇಷನ್

## CAREER ORIENTED PROGRAMMES (COP)

Students can avail the opportunity of pursuing one of the following Add-on Courses - Certificate, Diploma & Advanced Diploma Courses. The related Courses are

### B.Com & BBA

1. Human Resource Management 2. Foreign Trade 3. Insurance Management 4. Retail Management 5. Marketing Management 6. Entrepreneurship Development 7. Professional Communication & Soft Skills 8. Financial Management 9. Tax Management 10. Digital Marketing 11. Auditng

### B.Sc

1. Horticulture 2. Clinical Laboratory Techniques 3. Bioinstrumentation 4. Food & Nutrition science 5. Medical Biochemistry 6. Plant Tissue Culture 7. Food Processing Technologies 8. Agriculture & Fishery Management 9. Women Health and Hygiene 10. Basic Electronics 11. Basic Mathematics

### B.A

1. Communicative English 2. Agricultural Marketing Management 3. Photo Journalism 4. Sharana Sahithya 5. Functional Hindi 6. Sampreshan Kala 7. Yogic Sceince 8. Dance 9. Business Journalism & Cooperation 10. Communication for Development 11. Heritage Tourism 12. Spoken Sanskrit 13. Current issues in Indian Economy 14. Social Welfare 15. Women studies 16. Disaster Management 17. Human Rights 18. Music

### BCA

1. Graphic Design 2. Android Programming 3. Software Project Management 4. Animation

## ಶೈಕ್ಷಣಿಕ ವರ್ಷದ ಪ್ರಾರಂಭ

ಕಾಲೇಜಿನ ಶೈಕ್ಷಣಿಕ ವೇಳಾಪಟ್ಟಿಯು ಮೈಸೂರು ವಿಶ್ವವಿದ್ಯಾನಿಲಯದ ವೇಳಾಪಟ್ಟಿಗೆ ಅನುಗುಣವಾಗಿರುತ್ತದೆ.

### ಅರ್ಜಿಯೊಂದಿಗೆ ಸಲ್ಲಿಸಬೇಕಾದ ಪ್ರಮಾಣ ಪತ್ರಗಳು.

1. ಅಂಕಪಟ್ಟಿಯ ದೃಢೀಕೃತ ಜೆರಾಕ್ಸ್ ಪ್ರತಿ.
2. ಪಾಸ್‌ಫೋರ್ಟ್ ಅಳತೆಯ ಭಾವಚಿತ್ರ, ಅರ್ಜಿ ಜೊತೆಯಲ್ಲಿ ಒಂದು, ಮತ್ತೆ ಪ್ರವೇಶ ಪಡೆಯುವಾಗ ಮೂರು ಭಾವಚಿತ್ರಗಳು.
3. ಎಸ್.ಸಿ. / ಎಸ್.ಟಿ. / ವರ್ಗ–2ಎ / ವರ್ಗ–2ಬಿ / ವರ್ಗ–3ಎ / ವರ್ಗ –3ಬಿ ಈ ವರ್ಗಗಳಿಗೆ ಸೇರಿದವರು ಅಗತ್ಯ ಪ್ರಮಾಣಪತ್ರವನ್ನು ಅರ್ಜಿ ಸಲ್ಲಿಸುವಾಗಲೇ ನೀಡಬೇಕು. ಅನಂತರ ನೀಡಿದ ಪ್ರಮಾಣ ಪತ್ರಗಳು ಪರಿಗಣಿಸಲಾಗುವುದಿಲ್ಲ.
4. ಬೋಧನಾ ಶುಲ್ಕವನ್ನು ಮರುಪಾವತಿ ಮಾಡಿಕೊಳ್ಳಲು ಇಚ್ಛಿಸುವ ವಿದ್ಯಾರ್ಥಿಗಳು ವಾರ್ಷಿಕ ಆದಾಯ 44,000/–ರೂಗಳ ದೃಢೀಕೃತ ಆದಾಯ ಪ್ರಮಾಣ ಪತ್ರವನ್ನು ಸರ್ಕಾರಕ್ಕೆ ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಬೇಕು.
5. ಹೊರ ರಾಜ್ಯ ಮತ್ತು ಹೊರ ದೇಶದವರು ವಲಸೆ ಪ್ರಮಾಣ ಪತ್ರ ಹಾಗೂ ಇತರ ಅಗತ್ಯ ಪ್ರಮಾಣ ಪತ್ರಗಳನ್ನು ಲಗತ್ತಿಸಿರಬೇಕು.

### ಅಪೂರ್ಣ ಹಾಗೂ ಅವಶ್ಯ ದಾಖಲಾತಿಗಳು ಇಲ್ಲದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಅರ್ಜಿ ಜೊತೆಯಲ್ಲಿ ದಾಖಲಾತಿ ಪತ್ರಗಳ ದೃಢೀಕೃತ ಪ್ರತಿಗಳನ್ನು ಮಾತ್ರ ಲಗತ್ತಿಸಿರಬೇಕು. ಮೂಲ ದಾಖಲಾತಿ ಪತ್ರಗಳನ್ನು ಪ್ರವೇಶ ಸಂದರ್ಭದಲ್ಲಿ ತಪ್ಪದೆ ಹಾಜರುಪಡಿಸಬೇಕು. ಮೂಲ ಅಂಕಪಟ್ಟಿಯೊಂದಿಗೆ ಎರಡು ಜೆರಾಕ್ಸ್ ಪ್ರತಿಗಳನ್ನು ನೀಡಬೇಕು.

ಪ್ರವೇಶಕ್ಕೆ ಅರ್ಹರಾದವರ ಪಟ್ಟಿಯನ್ನು ಸೂಚನಾ ಫಲಕದಲ್ಲಿ ಪ್ರಕಟಿಸಲಾಗುವುದು. ಸೂಚಿತ ದಿನಾಂಕದೊಳಗೆ ಸಂಬಂಧಿಸಿದ ಎಲ್ಲಾ ಮೂಲ ದಾಖಲೆಗಳೊಂದಿಗೆ ನಿಗದಿತ ಶುಲ್ಕವನ್ನು ಪಾವತಿಸಿ ದಾಖಲಾಗುವುದು.

### ಪ್ರವೇಶ ಪ್ರಕ್ರಿಯೆ :

ಪದವಿಪೂರ್ವ ಅಥವ ತತ್ಸಮಾನ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರು ಮಾತ್ರ ವಿಶ್ವವಿದ್ಯಾನಿಲಯದ ನಿಯಮಾವಳಿಗನುಗುಣವಾಗಿ ಬಿ.ಎ., ಬಿ.ಎಸ್ಸಿ., ಬಿ.ಕಾಂ., ಬಿ.ಬಿ.ಎ., ಮತ್ತು ಬಿ.ಸಿ.ಎ. ಪದವಿ ತರಗತಿಗಳಿಗೆ ಪ್ರವೇಶ ಪಡೆಯಲು ಅರ್ಹರಾಗಿರುತ್ತಾರೆ. ಭರ್ತಿ ಮಾಡಿದ ಅರ್ಜಿಗಳನ್ನು ನಿಗದಿಪಡಿಸಿದ ದಿನಾಂಕದೊಳಗಾಗಿ ಕಛೇರಿಗೆ ಸಲ್ಲಿಸತಕ್ಕದ್ದು. ಅವಧಿ ಮೀರಿ ಸಲ್ಲಿಸುವ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ. ಕರ್ನಾಟಕ ಸರ್ಕಾರದ ತಾಂತ್ರಿಕ ಶಿಕ್ಷಣ ಮಂಡಳಿಯವರು ನಡೆಸುವ ಮೂರು ವರ್ಷದ ಕಮರ್ಷಿಯಲ್ ಪ್ರಾಕ್ಟೀಸ್ ಅಥವಾ ಸೆಕ್ರೆಟೆರಿಯಲ್ ಡಿಪ್ಲೊಮಾ ಪಡೆದ ವಿದ್ಯಾರ್ಥಿಗಳು ಕಾಲೇಜಿನಲ್ಲಿ ಎರಡನೆಯ ಬಿ.ಕಾಂ ಮತ್ತು ಬಿ.ಬಿ.ಎ. ತರಗತಿಗೆ ಪ್ರವೇಶ ಪಡೆಯಲು ಅರ್ಹರಾಗಿರುತ್ತಾರೆ. ಇವರು ಹಿಂದಿನ ಸೆಮಿಸ್ಟರ್‌ನ ಭಾಷೆ ಮತ್ತು ಇನ್ನಿತರ ವಿಷಯಗಳಲ್ಲಿ ಪರೀಕ್ಷೆಯನ್ನು ಕಡ್ಡಾಯವಾಗಿ ಬರೆಯತಕ್ಕದ್ದು.

### ವಿಶೇಷ ಸೂಚನೆಗಳು

1. ಪರೀಕ್ಷಾ ಶುಲ್ಕ ಮತ್ತು ಪ್ರವೇಶಾತಿಗಾಗಿ ಅರ್ಜಿ ಶುಲ್ಕವನ್ನು ಆನ್‌ಲೈನ್ ಮುಖಾಂತರ ಪಾವತಿಸುವ ಸೌಲಭ್ಯವಿದೆ.
2. ಒಮ್ಮೆ ಪಾವತಿಸಿದ ಶುಲ್ಕವನ್ನು ಯಾವುದೇ ಕಾರಣಕ್ಕೂ ಹಿಂತಿರುಗಿಸಲಾಗುವುದಿಲ್ಲ.
3. ಪರೀಕ್ಷಾ ಶುಲ್ಕವನ್ನು ಪ್ರತಿ ಚತುರ್ಮಾಸದಲ್ಲಿಯೂ ಪಾವತಿಸುವುದು ಕಡ್ಡಾಯವಾಗಿದೆ. ಇದರಿಂದ ಮುಂದಿನ ಚತುರ್ಮಾಸಕ್ಕೆ ಪ್ರವೇಶ ಪಡೆಯಲು ಅರ್ಹತೆ ಸಿಗುತ್ತದೆ.
4. ವಿದ್ಯಾರ್ಥಿನಿಯರು ತಾವು ಅಭ್ಯಸಿಸಲು ಆಯ್ದುಕೊಂಡ ಪದವಿ ತರಗತಿಯನ್ನು ನಿಗದಿತ ಅವಧಿಯ ಎರಡರಷ್ಟರಲ್ಲಿ ತೇರ್ಗಡೆ ಹೊಂದಬೇಕು

### ಮಾಧ್ಯಮ :

ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮದಲ್ಲಿ ಬೋಧನೆ ನೀಡಲಾಗುವುದು. ವಿದ್ಯಾರ್ಥಿನಿಯು ಕನ್ನಡ ಅಥವಾ ಇಂಗ್ಲಿಷ್ ಭಾಷೆಗಳಲ್ಲಿ ಪರೀಕ್ಷೆಗಳನ್ನು ಬರೆಯಬಹುದು.

### ಹಾಜರಾತಿ :

1. ಪ್ರತಿ ವಿಷಯದಲ್ಲೂ ಶೇ. 75% ರಷ್ಟು ಹಾಜರಾತಿ ಕಡ್ಡಾಯ.
